BROWEN BOOK ONLY

TIGHT BINDING BOOK

UNIVERSAL LIBRARY
OU_200823
UNIVERSAL LIBRARY

ಪ್ರಗತಿಶೀಲ ಸಾಹಿತ್ಯಮಾಲೆ - ೨

# ಭಾವಜೀವಿ

ಚೆನ್ನವೀರ ಕಣವಿ

1949

ಪ್ರಗತಿಶೀಲ ಸಾಹಿತ್ಯಮಾಲೆ, ಧಾರವಾಡ

ಸಂಪಾದಕ :

ಬಸವರಾಜ ಕಟ್ಟೀಮನಿ

ಪ್ರಕಾಶಕರು :
ಪ್ರಗತಿಶೀಲ ಸಾಹಿತ್ಯಮಾಲೆ
ಧಾರವಾಡ.

ಮುದ್ರಕರು :
ಶೇ. ಗೋ. ಕುಲಕರ್ಣಿ
ಸಾಧನ ಮುದ್ರಣಾಲಯ
ಧಾರವಾಡ.

ಮಾರಾಟಗಾರರು :
ಕರ್ನಾಟಕ ಸಾಹಿತ್ಯಮಂದಿರ
ಧಾರವಾಡ

●

ಬೆಲೆ : ಎಂಟಾಣೆ

●

ಎಲ್ಲ ಹಕ್ಕುಗಳೂ ಲೇಖಕರ ವಶದಲ್ಲಿ

# ಮುನ್ನುಡಿ

## (೧)

ಧಾರವಾಡದ ಕಾವ್ಯಾನುಭವ ಮಂಟಪದ ಶ್ರೀ. ಚೆನ್ನವೀರ ಕಣವಿಯವರನ್ನು ನಾನು ಕಳೆದ ಮೇ ತಿಂಗಳಲ್ಲಿ ಕಂಡೆ. ಅವರ ಸಹೃದಯತೆ, ವಿನಯ ಹಾಗು ಸೌಜನ್ಯಗಳು ನನ್ನ ಮನಸ್ಸನ್ನು ಆಕರ್ಷಿಸಿದವು. ಸಮಾನಧರ್ಮಿಗಳಾದ ಸ್ನೇಹಿತರೊಡನೆ ಬೆರೆತುಕೊಂಡು ಏಕೀಕೃತ ಕರ್ನಾಟಕದ ಎಳೆಯರ ಒಂದು ಮೇಳದಂತೆ ಆದರ್ಶದೆಡೆಗೆ ನಡೆದ ಈ ಉತ್ಸಾಹಿಗಳ ಗುಂಪು ಧಾರವಾಡದಲ್ಲಿಯ ನನ್ನ ವಿದ್ಯಾರ್ಥಿ ಜೀವನವನ್ನು ನೆನಪಿಗೆ ತಂದು ನನ್ನನ್ನು ಪುಲಕಿತನನ್ನಾಗಿ ಮಾಡಿತು. ಅವರ ಕೋಣೆಯ ಅಟ್ಟದ ಮೇಲೆ ಜರುಗಿದ ಮಂಟಪದ ಸಭೆಯ ಸವಿನೆನಪು ಇನ್ನೂ ಅಚ್ಚಳಿಯದೆ ನನ್ನ ಚಿತ್ತ ಭಿತ್ತಿಯ ಮೇಲೆ ಮೂಡಿದೆ. 'ಮಲ್ಲಿಗೆಯ ಮಂಟಪವೆ ಅನುಭವದ ಮಂಟಪವು' ಎಂದು ಹಿಂದೊಮ್ಮೆ ನಾನು ಬರೆದಿದ್ದೆ. ಅಂದಿನ ಆ ಸಭೆಯಲ್ಲಿ ಅನುಭವವೂ ಮಲ್ಲಿಗೆಯೂ ಚಿತ್ತ-ಶರೀರಗಳಂತೆ ಬೆರೆತುಕೊಂಡಿದ್ದವು.

'ಕಾವ್ಯಾಕ್ಷಿ' ಎಂಬ ಕವನ ಸಂಗ್ರಹವನ್ನು ಪ್ರಕಟಗೊಳಿಸಿ ಕಣವಿಯವರು ತಮ್ಮ ಕಾವ್ಯಜೀವನದ ಬಗ್ಗೆ ಭರವಸೆಯನ್ನೂ ಹೆಚ್ಚಿನ ಆಸೆಯನ್ನೂ ಹುಟ್ಟಿಸಿದ್ದಾರೆ. 'ಭಾವಜೀವಿ' ಎಂಬ ಈ ಕೃತಿಯಲ್ಲಿ ತಮ್ಮ ಸ್ಫೂರ್ತಿಯ ಉಗಮವನ್ನು ಗುರುತಿಸಲು ಹವಣಿಸಿ ಅದರ ಪ್ರವಾಹವನ್ನು ಚಿತ್ರಿಸಿದ್ದಾರೆ. ಈ ಮುದ್ದು ಕಾವ್ಯಕ್ಕೆ ಮುನ್ನುಡಿಯನ್ನು ನಾನು ಬಹಳ ಸಂತೋಷದಿಂದ ಬರೆಯುತ್ತಿದ್ದೇನೆ.

## (೨)

ಭಾವಜೀವನವೆಂದರೇನು? ಇದೂ ಒಂದು ಸ್ವತಂತ್ರ ಜೀವನ ದೃಷ್ಟಿಯೆಂದು ಒಪ್ಪಿಕೊಳ್ಳಬಹುದೆ? ಇದು ಬರಿ ಸ್ವಪ್ನರಂಜನೆಯಾಗಿರಬಹುದಲ್ಲ? ಬರಿ ಒಂದು ಮಧುರ ಭ್ರಮೆಗಿಂತ ಅದರಲ್ಲಿ ಹೆಚ್ಚಿನದೇನಿದೆ? ಭ್ರಮೆಯೇನೋ ಮಧುರವಾದುದು. ಆದರೆ ಭ್ರಮಿಷ್ಟನಾಗಿ ತಿರುಗಾಡುವದರಲ್ಲಿ ಏನು ಪುರುಷಾರ್ಥ? ಆದಷ್ಟು ಬೇಗ ಅದರೊಳಗಿಂದ ಪಾರಾಗಿ ಬುದಿ

ಸಂಪನ್ನತೆಯ ಇಲ್ಲವೆ ಕಾರ್ಯಸಮುಕ್ಷತೆಯ ಹಾದಿಯನ್ನು ಹಿಡಿಯುವದು ಒಳಿತಲ್ಲವೆ? ಕೂಟ ಪ್ರಶ್ನೆಗಳಿವು. ಇವುಗಳಿಗೆ ಸಮರ್ಪಕವಾದ ಉತ್ತರವನ್ನು ಕೊಡದೆ ಇಲ್ಲವೆ ಕೊಟ್ಟುಕೊಳ್ಳದೆ ಭಾವಜೀವಿಯು ಮುಂದುವರಿಯುವದು ಸಾಧ್ಯವಿಲ್ಲ.

ಜೀವನವು ಪರಿಪೂರ್ಣತೆಯನ್ನು ಮುಟ್ಟುವತನಕ ವಿವಿಧ ದೃಷ್ಟಿಕೋನಗಳ ಪ್ರಯೋಗ ಶಾಲೆಯಾಗುತ್ತದೆ. ಸತ್ಯ, ಸೌಂದರ್ಯ, ಪ್ರೇಮ, ಕಲ್ಯಾಣ, ಭಕ್ತಿ. ಈ ಪಂಚ ದೈವತಗಳ ಆರಾಧನೆಯೆಂದರೇ ಜೀವನ. ಈ ಪಂಚ ದೈವತಗಳನ್ನು ಸಾಕ್ಷಾತ್ಕರಿಸಿಕೊಂಡು ಅವುಗಳ ಉಸಿರನ್ನು ತನ್ನ ಉಸಿರಾಗಿ ಮಾಡುವ ಜೀವವೇ ಪರಿಪೂರ್ಣ ಜೀವ. ಆ ಸಿದ್ಧಿಯೇ ಸಿದ್ಧಿ. ವಿವೇಕ, ಕಲ್ಪಕತೆ, ಸಹೃದಯತೆ, ಸಬಲ ಸಾತ್ವಿಕತೆ, ಸಮಷ್ಟಿಯಲ್ಲಿ ಇವು ನೆಲಸುವಂತೆ ಮಾಡುವ ಯೋಗ್ಯತೆಯನ್ನು ಪಡೆದ ಸಿಷ್ಕಾಮ ಕಾರ್ಯಕ್ಷಮತೆ, - ಇವೇ ಈ ದೈವತಗಳ ಅಧಿಷ್ಠಾನವನ್ನು ಶಕ್ಯವಾಗಿಸುವ ವೇದಿಕೆಗಳು. ಒಬ್ಬನು ಶಕ್ತಿಯ ಆರಾಧಕನಾದರೆ ಇನ್ನೊಬ್ಬನು ಸೌಂದರ್ಯೋಪಾಸಕನಾಗುತ್ತಾನೆ. ಒಬ್ಬನು ಸತ್ಯ ಶೋಧಕನಾದರೆ ಇನ್ನೊಬ್ಬನು ಸಾತ್ವಿಕತೆಗೆ ಶರಣು ಹೋಗುತ್ತಾನೆ. ಮಗುದೊಬ್ಬನು ನಲುಮೆಯ ಅಡಿಯಾಳಾಗುತ್ತಾನೆ. ಒಂದೊಂದು ಜೀವನದಲ್ಲಿ ಒಂದೊಂದು ಸ್ಫೂರ್ತಿಯು ಅಂಕುರಿಸುತ್ತದೆ. ಎರಡುಮೂರು ದೈವತಗಳ ಕೃಪೆಯನ್ನೂ ಒಂದೊಂದು ಜೀವನವು ಪಡೆದಿರುತ್ತದೆ. ಐದೂ ಪಕಳೆಗಳು ಅರಳಿದಾಗ ಜೀವವು ಪ್ರಫುಲ್ಲವಾಗುತ್ತದೆ.

ಆದರೆ ಒಂದು ಸಿದ್ಧಿಯಲ್ಲಿ ಉಳಿದ ಸಿದ್ಧಿಗಳೂ ಸಮಾವೇಶವಾಗದೆ ಇಲ್ಲ. ಉದಾಹರಣಾರ್ಥವಾಗಿ, ಸತ್ಯಾನ್ವೇಷಿಯಾದ ವಿವೇಕ ತನ್ನಲ್ಲಿಯೇ ಸೌಂದರ್ಯದ ಪರಮಾವಧಿಯನ್ನು ಕಂಡುಕೊಳ್ಳುತ್ತದೆ. ವಿವೇಕವೇ ಕಲ್ಯಾಣಕರವಾಗುತ್ತದೆ. ವಿವೇಕದ ಗರ್ಭದಲ್ಲಿಯೇ ಪ್ರೇಮ – ಶಕ್ತಿಗಳು ಅಂಕುರಿಸುತ್ತವೆ.

ಭಾವ ಜೀವಿಯದು ಸೌಂದರ್ಯ – ಪ್ರೇಮಗಳ ಹಾದಿ. ಹೃದಯ ಕ್ಷೇತ್ರದ ನೇಗಿಲಯೋಗಿಯವನು. ಆತ್ಮಕೃಷೀವಲನಾಗಲು ಅವನು ಹವಣಿಸುತ್ತಾನೆ. ವಿವೇಕವೇ ಅವನ ಕೈದೀವಿಗೆಯಾಗುತ್ತದೆ. ಅದರ ಸಹಾಯ

ದಿಂದ ಹೃದಯಸಂಸ್ಕಾರ ಹಾಗು ಭಾವ ಜೀವನವನ್ನು ಅವನು ಪವಿತ್ರವಾಗಿಯೂ ಸುಂದರತರವಾಗಿಯೂ ಮಾಡುತ್ತಾನೆ. ಕಲಾಕೃತಿಯೇ ಅವನ **ಕೃತಿ.** ಅದೇ ಕಲ್ಯಾಣಕರವಾಗುತ್ತದೆ. ಆ ಕೃತಿಯನ್ನೇ ಅವನು ಸಮಾಜಕ್ಕೆ ಕಾಣಿಕೆಯೆಂದು ಇತ್ತಾಗ ಅದೇ ಅವನ ಶಕ್ತಿಸಂಚಯವಾಗುತ್ತದೆ. ಸಿದ್ಧನ ಪಂಚವಿಶಾಲ ಕೃತಿಯೊಂದನ್ನು ಬಿಟ್ಟರೆ ಉಳಿದ ಯಾವ ಕೃತಿಗಿಂತಲೂ ಅವನ ಕೃತಿಯು ಕಡಿಮೆಯುದಲ್ಲ. ಬುದ್ಧಿಯೂ ಗೆಯ್ಮೆಯೂ ಸಮಾಜ ಸೇವೆಯೂ ಹಸನಾಗುವದು ಅವಶ್ಯವಿದ್ದಂತೆ ಮಾನವನ ಹೃದಯವಂತಿಕೆಯು ಹಾಗು ಕಲ್ಪಕತೆಯು ಕಾಡು ನಂದನದ ಬೀಡಾಗಬೇಕಾಗಿದೆ. ಈ ಗುರಿಯನ್ನು ಸಾಧಿಸಲು ಬದ್ಧನಾಗಿ ನಿಂತಿದ್ದಾನೆ ಭಾವಜೀವಿ.

ಗುರಿಯನ್ನು ಅವನು ಸಾಧಿಸುವ ಬಗೆಯಾವುದು? ಅದು ತ್ರಿವಿಧವಾಗಿದೆ. ಒಂದು ದೃಷ್ಟಿಯಿಂದ ಅವನು ವ್ಯಕ್ತಿಯ ವ್ಯಕ್ತಿತ್ವಕ್ಕೆ ತೇಜವನ್ನೂ ಕಳೆಯನ್ನೂ ತಂದುಕೊಡುತ್ತಾನೆ. ವ್ಯಕ್ತಿಯ ಭಾವಜೀವನವು ನಯವಾಗುವಂತೆ ಮಾಡುತ್ತಾನೆ. ಕಾಮವನ್ನು ಪ್ರೇಮವಾಗಿ ಮಾರ್ಪಡಿಸುತ್ತಾನೆ. ಸಂಸ್ಕೃತಿಯಿಲ್ಲದಲ್ಲಿ ಸಂಸ್ಕೃತಿಯನ್ನು ಕೊನರಿಸುತ್ತಾನೆ. ನೀರಸವಾದ ಮನಸ್ಸಿನಲ್ಲಿ ರಸಗಂಗೆಯನ್ನೇ ಹಾಯಿಸುತ್ತಾನೆ. ತನ್ನ ವ್ಯಕ್ತಿತ್ವದ ಸ್ವಯಂ ಶಿಲ್ಪಿಯಾಗುತ್ತಾನೆ. ಅದನ್ನು ಕುಸಿರು ಕುಸಿರಾಗಿ ಕಂಡರಿಸಿ ಉಳಿದ ವ್ಯಕ್ತಿಗಳೂ ತಮ್ಮನ್ನು ತಾವೇ ಹೇಗೆ ರೂಪಿಸಿಗೊಳ್ಳಬಲ್ಲರೆಂಬುದನ್ನು ತೋರಿಸುತ್ತಾನೆ. ಆತ್ಮಚಿಂತನವೂ ಆತ್ಮಪರೀಕ್ಷಣವೂ ಇಲ್ಲಿ ಅವನಿಗೆ ಸಾಧನಗಳಾಗುತ್ತವೆ.

ಭಾವಜೀವಿಯ ದರ್ಶನವು ಮೇಲೆ ಹೇಳಿದಂತೆ ಆಳವನ್ನಲ್ಲದೆ ವಿಸ್ತಾರವನ್ನೂ ಪಡೆಯುತ್ತದೆ. ವಿಶ್ವ ಹೃದಯದ ಸೂಕ್ಷ್ಮ ಚಲನವಲನಗಳ ಪ್ರತಿಬಿಂಬವಾಗುತ್ತದೆ.

"You go not till I set you up a glass
Where you may see the inmost part of you"

ಎಂದು ಹ್ಯಾಮ್‌ಲೆಟ್‌ನು ಅಪರಾಧಿನಿಯಾದ ತನ್ನ ತಾಯಿಗೆ ಹೇಳಿದಂತೆ ಭಾವಜೀವಿಯು ಎಡವುತ್ತ ಮುಗ್ಗುತ್ತ ನಡೆದ ಮಾನವ ಕುಲಕ್ಕೆ ಹೇಳುತ್ತಾನೆ. ಸ್ವಂತದ ಸಮಸ್ಯೆಗಳನ್ನೆಲ್ಲ ಬದಿಗೊತ್ತಿ 'ಅರ್ಪಣ' ಭಾವದ

ಉತ್ಕಟತೆಯ ಮೂಲಕ ಭಾವಜೀವಿಯು ವಿಶ್ವ ಹೃದಯದ ದರ್ಪಣವಾಗುತ್ತಾನೆ. ಅದರ ಆಸೆ–ಆಕಾಂಕ್ಷೆಗಳನ್ನೂ ಕನಸು–ನೆನಸುಗಳನ್ನೂ ಗುಣದೋಷಗಳನ್ನೂ ಅದ್ಭುತವಾಗಿ ಬಿಂಬಿಸಿ ತೋರಿಸುತ್ತಾನೆ. ವ್ಯಕ್ತಿತ್ವವು ತನ್ನ ಸೀಮೆಗಳನ್ನು ಮೀರಿ ಇಲ್ಲಿ ವಿಶ್ವದ ಕನ್ನಡಿಯಾಗುತ್ತದೆ. ಮಾನವ ಕುಲದ ಭವಿಷ್ಯದ ಬಗ್ಗೆ ವಿಚಾರ, ವಿವಿಧ ಮಾನವೀಯ ಸ್ವಭಾವದ ಪ್ರಕಾರಗಳ ಅನುಭವ, ಕಾಲಗತಿ, ಸುತ್ತಣ ಪ್ರಕೃತಿಯ ರಮ್ಯತೆ ಭಯಾನಕತೆಗಳ ದರ್ಶನ, ಇವುಗಳನ್ನೆಲ್ಲ ಅರಗಿಸಿ ಭಾವಜೀವಿಯ ಆಂತರಿಕ ಜೀವನವು ವಿಸ್ತೃತವಾಗುತ್ತದೆ.

ಭಾವಜೀವನದ ಎತ್ತರವೂ ಇದೆ. ವ್ಯಕ್ತಿತ್ವವನ್ನು ಬರಿ ಸಾಕ್ಷಿತ್ವವನ್ನಾಗಿ ಮಾಡಿದ ಭಾವಜೀವಿಯು ಹೃದಯಾಂತರದಲ್ಲಿರುವ ಚೈತ್ಯ ಪುರುಷನಿಂದ ಹಾಗು ಅಧಿ ಪ್ರಜ್ಞೆಯ (super conscience) ಲೋಕಗಳಾದ ಅಧಿ ಮನಸ್ಸು (Higher Mind) ಪ್ರಕಾಶಿತ ಮನಸ್ಸು (Illuminated mind)), ಪ್ರೇರಣೆ (Intuition) ಮೊದಲಾದ ಸಿಟ್ಟಿನಿಂದ ಸ್ಫೂರ್ತಿಯನ್ನು ಪಡೆಯುತ್ತಿರುತ್ತಾನೆ. ಈ ಸ್ಫೂರ್ತಿಯ ಉಗಮವನ್ನು ನಿಚ್ಚಳವಾಗಿ ಅರಿಯತೊಡಗಿದಂತೆ, ಈ ಲೋಕಗಳಲ್ಲಿ ಅವನ ಪ್ರಜ್ಞೆಯು ಹೆಚ್ಚು ಹೆಚ್ಚಾಗಿ ಜಾಗೃತವಾದಂತೆ ಭಾವಜೀವಿಯು ನೂತನವಾದ ವ್ಯಕ್ತಿತ್ವವೊಂದನ್ನು ಧಾರಣ ಮಾಡುತ್ತಾನೆ ಈ ವ್ಯಕ್ತಿತ್ವಕ್ಕೆ ಆಳ–ಬಿತ್ತರಗಳಲ್ಲದೆ ಎತ್ತರವೂ ಉಂಟು. ಸಾಮಾನ್ಯ ವ್ಯಕ್ತಿಯ ವ್ಯಕ್ತಿತ್ವಕ್ಕೆ ಅಂತಹ ಆಳವಾಗಲಿ, ವಿಸ್ತಾರವಾಗಲಿ, ಎತ್ತರವಾಗಲಿ ಇರುವದಿಲ್ಲ. ಈ ಮೂರನ್ನೂ ವ್ಯಕ್ತಿಯು ಪಡೆದಾಗ 'ವ್ಯಕ್ತಿ'ಯಾಗಿ ನಿಂತಿದ್ದ ಅಹಂಕಾರದ ಗಂಟು ಸಡಿಲಾಗಿ ಪುರುಷನು ಮತ್ತೆ 'ಆಧಾರ'ದ ಇಲ್ಲವೆ ವ್ಯಕ್ತಿತ್ವದ ರಾಜನಾಗುತ್ತಾನೆ. ಇಂತಹ ವ್ಯಕ್ತಿತ್ವವು ಒಂದು ಬಿಂದುವಾದರೂ ಆ ಬಿಂದುವು ವಿಶ್ವ ಶಕ್ತಿಗಳ ಕೇಂದ್ರವಾಗಿರುತ್ತದೆ. ವ್ಯಕ್ತಿತ್ವದ ಸೀಮೆಗಳನ್ನು ಅದು ಒಪ್ಪಿದ್ದರೂ ನಿಃಸೀಮವೇ ಅಲ್ಲಿ ಹರಿಯುವ ಪ್ರವಾಹವಾಗಿರುತ್ತದೆ. ವಿಶ್ವದ ಜೀವನವೇ ವ್ಯಕ್ತಿಯ ಜೀವನವಾಗಿ ವ್ಯಕ್ತಿ–ವಿಶ್ವಗಳ ದ್ವಂದ್ವವು ಹೊಸತೊಂದು ಪೌರುಷದಲ್ಲಿ ಇಲ್ಲವೆ ನವೀನ ವ್ಯಕ್ತಿತ್ವದ ನಿರ್ಮಿತಿಯಲ್ಲಿ ಒಂದಾಗಿ ಲೀನವಾಗುತ್ತದೆ.

ಹೀಗಿದೆ ಭಾವಜೀವಿಯು ಪಡೆಯಬೇಕಾದ ಸಿದ್ಧಿ. ಮಾನವನು ವಿಶ್ವ ಮಾನವನಾಗಬೇಕಾಗಿದೆ. ಆಗಿ ವಿಶ್ವದ ದೈವರೇಷೆಯನ್ನೇ ಪಲ್ಲಟಿಸ ಬೇಕಾಗಿದೆ. ಈ ಮಹಾ ಕಾರ್ಯದಲ್ಲಿ ಭಾವಜೀವಿಯೂ ಒಂದು ಮಹತ್ವದ ಘಟಕವಾಗಿದ್ದಾನೆ.

(೩)

'ಭಾವಜೀವಿ' ಎಂಬ ಈ ಕೃತಿಯು ಈ ಮಾರ್ಗದಲ್ಲಿ ಕಣ್ದೆರೆದ ಜೀವದ ಕನಸು–ನೆನಸು. ಭಾವಸ್ಪಂದನದಿಂದ ಪುಲಕಿತವಾಗಿ ಕವಿಯು ಆ ಸ್ಪಂದನದ ಮೂಲವನ್ನು ತಿಳಿಯಲು ಹವಣಿಸುತ್ತಾನೆ.

"ನನ್ನ ನಾನೇ ಅಳೆದು ಕಳೆದು ನೋಡಲುಬೇಕು
ಎಂದು ಪೀಡಿಸದಿರುವ ದಿನವದಿಲ್ಲ"

ಎಂದು ಆತ್ಮಪರೀಕ್ಷಣದ ಜೋಗುಳವನ್ನು ಹಾಡುತ್ತಾನೆ.

"ಅಂತರಂಗದ ನಿಸ್ತರಂಗ ತಿಳಿಗೊಳದಲ್ಲಿ
ಲಲಿತಾರವಿಂದಗಳ ಮಕರಂದವು"

ಎಂದು ನೆನಸಿನ ಕಾಸಾರದಲ್ಲಿ ಇಣಿಕಿ ನೋಡುತ್ತಾನೆ.

ಈ ಸಹೃದಯತೆ ಮೊದಲು ಉದಿಸಿದ್ದು ಹೇಗೆ? 'ನಾಗರಿಕ ನಾಗರವು ಹುತ್ತು ಕಟ್ಟದ' ಹಳ್ಳಿಯಲ್ಲಿ ಈ ಸೊಗಸು ಬಂದಿತು. ಅಕ್ಕ, ಅಣ್ಣ, ಗೆಳೆಯ; ಆಟ, ಕುಣಿತ, ಜಾನಪದ ಗೀತ; ಹಳ್ಳ, ಆಲದ ಮರ, ತೋಟ; ಲಂಬಾಣಿ, ಕಮ್ಮಾರ ಮಾನಪ್ಪ, ಕೆಲಸಿಗರ ಕೆಂಚ; ಹಳ್ಳದ ದಂಡೆಗಿರುವ ಮಾಸತಿ ಕಲ್ಲು, ತಂದೆ ಓದಿದ **ಅನುಭವಾಮೃತ;** ಹೀಗೆ ವಿಧವಿಧವಾಗಿ ಜೀವನದ ಅದ್ಭುತವು ಕಾಣಿಸಿಕೊಂಡು ಭಾವಜೀವಿಯ ಕಣ್ಣನ್ನು ತೆರೆಯುತ್ತದೆ.

"ಬಾಳ ಸಂಪುಟದಲ್ಲಿ ಬಾಲ್ಯವೆಂಬುವದೊಂದು
ಅಳಿಸಲಾರದ ಮಧುರ ಭಾವಗೀತ."

ಈ ಮಧುರ ಸ್ಮೃತಿಯೇ ಕವಿಯ ಭಾವ ಸೋಪಾನದಲ್ಲಿಯ ಮೊದಲನೆಯ ಮೆಟ್ಟಲಾಗಿದೆ.

ಧಾರವಾಡಕ್ಕೆ ಬಂದಾಗ ಅಲ್ಲಿಯ ಜನಜಾತ್ರೆಯನ್ನು ನೋಡಿ ಕವಿಯು ವಿಹ್ವಲಗೊಳ್ಳುತ್ತಾನೆ. ಉಳ್ಳವರ ನಿರ್ದಯ, ವೇದಿಕೆಯ ಪೀಠದಲ್ಲಿಯ ಡಾಂಭಿಕತೆ, ಅನ್ನದನ್ಯಾಯ,– ಇವಕ್ಕೆ ಕವಿಯು ಹೇಸುತ್ತಾನೆ.

"ಇರಲಿ; ಲೋಕದ ಡೊಂಕ ತಿದ್ದುವಾಸೆಯು ಬೇಡ,
ನನ್ನೊಡಲ ಬ್ರಹ್ಮಾಂಡ ನನ್ನ ಲೋಕ"

ಎಂದು ಮತ್ತೆ ತನ್ನೊಳಗೇ ಮುಳುಗುತ್ತಾನೆ.

ಹೀಗಿರಲು ಪ್ರೇಮ-ವಿರಹಗಳು ಬಂದು ಭಾವಜೀವಿಯ ಪ್ರಜ್ಞೆಯನ್ನು ಇನ್ನಷ್ಟು ಕುದುರಿಸುತ್ತವೆ. ಒಬ್ಬ ಚಿರಸುಧಾಕರೆಯು

"ನಾನು ಕವಿಯೆಂಬುದನು ನನಗೆ ತೋರಿಸಿ ಕೊಟ್ಟು
ಮೌನ ವೀಣೆಯನಿಂತು ಮಿಡಿಸುತಿಹಳು"

ಎಂದು ಭಾವಜೀವಿಯು ಹೇಳುತ್ತಾನೆ. ಈ ವಿರಹಕ್ಕೆ ಮದ್ದಾಗಿ ಕಾವ್ಯೋಪಾಸನೆಯು ಬರುತ್ತದೆ. ಒರ್ವ ತಂಗಿಯಂತಹ ಕನ್ನೆಯ ಭ್ರಾತೃವಾತ್ಸಲ್ಯವೂ ಕಾಯುತ್ತದೆ. ಸ್ನೇಹವು ರಕ್ಷಾಕವಚವಾಗುತ್ತದೆ. ಜ್ಞಾನಸಿಂಧುವಿನ ಕರೆಯು ಚಿತ್ತವನ್ನು ಆಕರ್ಷಿಸುತ್ತದೆ. ಧಾರವಾಡದ ನಿಸರ್ಗ ರಮಣೀಯತೆಯು ಶಾಂತಿದಾಯಕವಾಗುತ್ತದೆ.

"ಹುಲುಗಲದ ಟೊಂಗೆಯಲಿ ಹೂತಿರುವ ಹೊಂಗೆಯಲಿ
ಮುಳ್ಳುಕಂಟಿಗಳಲ್ಲಿ ಸ್ವರ್ಣ ಕಲಶ!"

ಧಾರವಾಡದ ಹವೆಯಲ್ಲಿ ಸುಳಿಯುವ ದತ್ತವಾಣಿಗೆ ಹೃದಯವು ಉಕ್ಕೇರುತ್ತದೆ. ಗೂಢ ತತ್ವದ ತಿರುಳನ್ನರಿಯಲು ಜೀವವು ಹಾತೊರೆಯುತ್ತದೆ.

ಆದರೆ ಸುಖದ ಮಿಂಚಿನ ಹಿಂದೆ ದುಃಖ ಗುಡುಗಾಡುತ್ತದೆ. ಸಮಾಜದಲ್ಲಿಯ ಮೋಸ, ಛಿದ್ರಾನ್ವೇಷ, ಹೊಗಳಿಕೆ ತೆಗಳಿಕೆಗಳನ್ನು ನೋಡಿ ಮತ್ತೆ ತಲೆ ಚಿಟ್ಟು ಹಿಡಿಯುತ್ತದೆ. ಇದಕ್ಕೆ ಇರುವ ಉಪಾಯ ಒಂದೇ :

"ಆತ್ಮಾನುಸಂಧಾನಕೆನ್ನನೆಳಸೈ ತಂದೆ
ಸರ್ವಾತ್ಮಸಾಕ್ಷಿಯಲಿ ನೀ ಬೆಳಗುತ"

ಎಂಬ ಪಲ್ಲವಿಯೇ ಮತ್ತೆ ಕಾಯುತ್ತದೆ.

ಅಸಂಖ್ಯಾಕ ಮಾನವ ಸಮುದಾಯದಲ್ಲಿ ನಾನೊಂದು ಘಟಕ. ಕಟ್ಟರಣ್ಯದ ತರುಗುಲ್ಮಗಳಲ್ಲಿ ನಾನೊಂದು ಎಲೆಯೆಂಬ ಅರಿವು ಭಾವಜೀವಿಯಲ್ಲಿ ಮೂಡುತ್ತದೆ. ವಿಮಲ ಭಾವಾನುಭಾವದಲ್ಲಿ ಒಳ ನಿಧಾನದ ಪರಿಯು ತೋರಬಹುದು.

"ಆ ವರೆಗು ಅನಿಸಿಕೆಯ ನೆನಸಿಕೆಯ ತುಂಬಿರುವ
ಚಿತ್ಸೂರ್ಯ ಕಿರಣಗಳನಾಯುತಿಹೆನು;
ಹಗಲುಗಳ್ಳರು ನನ್ನ ಮನವ ಹಾಡೇ ಹಗಲು
ಹೊಕ್ಕಿರಲು ಮೊದಲವರ ಓಡಿಸುವೆನು"

ಎಂದು ಭಾವಜೀವಿಯು ತನ್ನ ವ್ಯಕ್ತಿತ್ವದ ಆಳದ ಕಡೆಗೆ ತಿರುಗುತ್ತಾನೆ. ಭಾವನೆಯನ್ನು ಜೀವನವನ್ನಾಗಿ ಮಾಡಬೇಕೆಂದು ಎಣಿಸುತ್ತಾನೆ:

"ಮನೆಯ ಕಟ್ಟುವ ಮೊದಲು ನಕ್ಷೆಯನು ತೆಗೆವಂತೆ
ಭಾವ ಕಾಣುವದದನು ಕನಸಾಗಿಸಿ,
ಆಮೇಲೆ ಕಲ್ಲು ಇಟ್ಟಿಗೆ ಗಚ್ಚು ಗಾರೆಯಲಿ
ಭದ್ರಗೊಳಿಸುವರದನು ರೂಪುಗೊಳಿಸಿ."

ಹೀಗೆ 'ಬಗೆ'ಯನ್ನು ಒಗಿಯುವಾಗ ಬಂದ ಅನುಭವದ ತಿಳಿಯನ್ನು ನುಡಿಯೊಳಗಿಳಿಸುವದರಲ್ಲಿ ಜೀವಕ್ಕೆ ಹರುಷವಿದೆ. ಅದಕ್ಕಾಗಿ ಭಾವಜೀವಿಯು ಕವಿಯಾಗುತ್ತಾನೆ.

(೪)

ಭಾವಜೀವನದ **ಆಳದ** ಕಡೆಗೆ ಹೇಗೆ ಅಂತಃಕರಣವು ಒಲಿಯುವದೆಂಬುದು ಈ ಕೃತಿಯಲ್ಲಿ ಸುಂದರವಾಗಿ ಚಿತ್ರಿತವಾಗಿದೆ. ಸರಳತೆಯೂ ರಾಮಣೀಯಕತೆಯೂ ಇಲ್ಲಿ ಬೆರೆತುಕೊಂಡಿವೆ. ಭಾವದ ನೇರತೆಯೂ ನುಡಿಯ ನಿರತೆಯೂ ಒಂದಕ್ಕೊಂದು ಔತಣವಿತ್ತಿವೆ.

ಭಾವಜೀವನದ ವಿಕಾಸವನ್ನು ಚಿತ್ರಿಸುವದು ಭಾವಗೀತಗಳ ಈ ಯುಗದಲ್ಲಿ ಸಹಜವಾದ ಗುರಿಯಾಗಿದೆ. ಅದನ್ನೇ ಮುಖ್ಯ ವಸ್ತುವಾಗಿಟ್ಟುಕೊಂಡ **ಸಖೀಗೀತ, ನನ್ನ ನಲ್ಲ, ಮಧುರಗೀತ, ಆಕಾಶಗಂಗೆ** ಮೊದಲಾದ ನೀಳ್ಗವಿತೆಗಳು ಪ್ರಕಟವಾಗಿವೆ. ತಾತ್ವಿಕ ವಿವೇಚನವು ಒಂದರದಿಂದ ಹೆಚ್ಚಾಗಿದ್ದರೂ **ಮುಂಕಣ ತಿಮ್ಮನ ಕಗ್ಗವು** ಇದೇ ಜಾತಿಯದು. 'ಭಾವಜೀವಿ'ಯ ಛಂದ ಹಾಗು ಶೈಲಿಯ ರೀತಿ ಮಧುರಚೆನ್ನರ ಕೃತಿಗಳ ಮಾದರಿಗೆ ಸೇರಿದೆ. ಭಾವಜೀವಿಯೇ ಮಧುರಚೆನ್ನರನ್ನು ಕೃತಿಯಲ್ಲಿ ನೆನೆಸುತ್ತಾನೆ. ಇಲ್ಲಿಯ ಕಮ್ಮಾರ ಮಾನಪ್ಪನ ಮೋರೆಯನ್ನು ನೋಡಿ ಬಾಂಗ್ಷೆಬೀನ

“ ಅನುಭಾವ ಅನುಭಾವವೆಂದೆಂಬಿರಿ,
ಅನುಭಾವವೆಂಬುದು ನೆಲದ ಮರೆಯ ನಿಧಾನ ಕಾಣಿರೊ;
ಅನುಭಾವವೆಂಬುದು ಅಂತರಂಗದ ರತ್ನ ಕಾಣಿರೊ;
ಅನುಭಾವವೆಂಬುದು ಶಿಶು ಕಂಡ ಕನಸು ಕಾಣಿರೊ;
ಅನುಭಾವವೆಂಬುದು ಆತ್ಮವಿದ್ಯೆ.
ಅನುಭಾವವೆಂಬುದು ತಾನಾರೆಂದು ತೋರುವದು.
ಅನುಭಾವವೆಂಬುದು ನಿಜನಿವಾಸದಲ್ಲಿರಿಸುವದು.
ಇಂತಪ್ಪ ಅನುಭಾವವನರಿಯದೆ ಶಾಸ್ತ್ರಜಾಲದ ಪಸಾರವನಿಕ್ಕಿ,
ಕೊಳ್ಳದ ಕೊಡದ ವ್ಯವಹಾರವ ಮಾಡುವ ಅಣ್ಣಗಳಿರಾ,
ನೀವೆತ್ತ? ಅನುಭಾವವೆತ್ತ? ”

— ಶ್ರೀಬಸವಣ್ಣ

# ಭಾವಜೀವಿ

ಪ್ರಕೃತಿ ಮಾತೆಯು ಮಡಿಲ ಹಸುರು ಕುಸುರಿನ ಮೃದುಲ
ತಲ್ಪದಲಿ ಹಾಯಾಗಿ ಮೈಚಾಚಿರೆ,
ಪಡುವಣದ ಬಾನದೇಗುಲದೆದುರು ಕಿರುಮೋಡ
ಮೌನದಲಿ ತಲೆಬಾಗಿ ಕೈಮುಗಿದಿರೆ,—

ಪೊಂಜೊಡರು ತೂಗಿದೊಲು ನೆಲಬಾನ ತಳ್ಕೆಯಲಿ
ನೇಸರನು ಬಿಡುಗಣ್ಣನಾಗುತಿರಲು,
ಸಿಂಗರದ ಬಂಗಾರದಂಗಾರ ಹರಡಿದೊಲು
ಹೊಂಬೆಳಕು ಹೊಡಕರಿಸಿ ಹೊಮ್ಮುತಿರಲು—

ಮನಸಿನೇಕಾಂತದಲಿ ಹಗಲುಗನಸಿನ ಸ್ವರ್ಣ-
ಮಂದಿರದ ಛಾಯೆಯೊಲು ಬೆಟ್ಟ ಕಾಸು;
ಗಂಭೀರ ಗುಂಭದಲಿ ಮೈದುಂಬಿ ನಿಂತಿಹವು-
ಎನಿತಲ್ಪ ಜೀವಿಗಳೊ ನೀನು-ನಾನು !

ತನಿವಣ್ಣ ತಿರಿದುಂಡು ಗಿಳಿವಿಂಡು ಹಾರುತಿವೆ
ಮುಗಿಲಲ್ಲಿ ತೇಲುತಿಹ ಬಳ್ಳಿಯಂತೆ,
ಬೆಳ್ಳಕ್ಕಿ ಬಳಿವಿಡಿದು ಓರಣದಿ ಸಾಗಿಹವು
ಮಾರುಗೈಯಲಿ ಮುಗಿಲನಳೆಯುವಂತೆ !

ನೆಲದೆದೆಯ ಕಂಪುಂಡ ತಂಗಾಳಿ ಮೈದಡವಿ
ತೀಡುತಿದೆ ನಲ್ಮೆಗೈ ಹರಸುವಂತೆ,
ಲೋಕಾಭಿರಾಮದಲಿ ಹಾಡಿ ಹಾರಾಡುತಿವೆ
ಹಕ್ಕಿ ತಿರೆಯಾನಂದ ಸಾರುವಂತೆ !

ಬರಬರುತ ಜನರ ಗುಂಪೆಂದೊಡನೆ ಮನವೇಕೊ
ಬಸವನಾ ಹುಳದಂತೆ ಮುದುಡುತಿತ್ತು;
ಊರ ಹೊರಗಿನ ತೋಟ-ಬೇಲಿ, ಪಾತರಗಿತ್ತಿ
ಕಾಡ ಗಿಡಗಂಟಿಗಳ ಸಂಗವಾಯ್ತು.

ಆಟ ಬಯಲಾಟದಲಿ ಕೋಲು ಕುಣಿತಗಳಲ್ಲಿ
ಹಂತಿ ತಿರುಗುತ ಸುಗ್ಗಿ ಮೊದಲಾಗಿರೆ,
ಮುಕ್ಕು ಮುಕ್ಕಿಗೆ ಬೀಸುಗಲ್ಲ ಜೊತೆಹಾಡುಗಳ
ಸುರಿಮಳೆಯು ಜನಪದವ ಪ್ರೇರಿಸುತಿರೆ,

ನಮ್ಮೂರ ಗುಡ್ಡದೋರೆಯು ಬದಿಯ ಕಿರುಹಳ್ಳ
ಸುವಿಶಾಲ ಆಲ, ಎಲೆವಳ್ಳಿ ತೋಟ
ಈಶ್ವರನ ಗುಡಿ, ಕಲ್ಲುಕಟ್ಟೆ, ಮಾದರಕೇರಿ
ಕೆಮ್ಮರಡಿ-ಏನೆಲ್ಲ ಎಂಥ ನೋಟ !

ಗುಂಡುಗಜಗವನಾಡೆ ಚಿಣ್ಣಿಕೋಲನು ತೂರೆ
ಮನೆಯವರ ಕಣ್ಮರೆಸಿ ಓಡಾಟವು;
ಬೆಲ್ಲವತ್ತದ ಕಾಯ ಬುಗುರಿಯಲಿ ಜಾಳಿಗೆಯ
ಸುತ್ತಿಬಿಚ್ಚಲು ನಾದ ಘೋಂಕಾರವು !

" ಬಿಟ್ಟೆಟ್ಟಿ ಬೆಳಗಾತು ತಟ್ಟೆಮನಿ ಹಾಳಾತು
ಹಾಳುಗೋಡೆಯ ದೆವ್ವ ಬಂದು ಬಡಿತು "—
ಕಣ್ಣುಮುಚ್ಚಾಡುತ್ತ ಗೊಂಬೆಮದುವೆಯ ಹೂಡೆ
ಹಂಚುಹರಳುಗಳಾಗ ಹವಳ ಮುತ್ತು !

'ತಾಂಡೆ' ಯಿಂದಲಿ ಬರುವ ಲಂಬಾಣಿ ಹೆಂಗಸರ
ಉಡುಪು ತೊಡಪೇನವರ ಮಾತೆ ಬೇರೆ-
" ಲಂಬಾಣಿ ಗಿಲ್‌ಗಿಲ್....ನಾ ಬಂದೆ ನಿಲ್‌ನಿಲ್....
ಕಟಿಗಿ ಹೊರಿ ಚೆಲ್‌ಚೆಲ್....ಏ ಏಡಿರೆ "

ಅಣಕವಾಡನು ಕಟ್ಟಿ ಅವರ ಕುಣಿತಕೆ ಹಾಡಿ
ಆನಂದಪಟ್ಟುದನು ಮರೆಯಬಹುದೆ ?
ಸುಡುಗಾಡಸಿದ್ಧ ತಾನೊಂದು ಸಲ ಹೆದರಿಸುತ
ಜೋಳಿಗೆಯ ಬಾಯ್ದೆರೆಯಲತ್ತುಕರೆದೆ.

ಜೋಳದಾ ಪಯಿರು ಹೊಡೆಹಾಯ್ದು ಹೊಂದಲೆದೂಗೆ
ಅಕ್ಕಡಿಯ ಬಳ್ಳಿಗಳು ಹುಲುಸಾಗಿರೆ,
ಬನ್ನಿಗಿಡದಡಿಯಲ್ಲಿ ತತ್ರಾಣಿ ತಣ್ಣೀರ
ಕುಡಿದು ಬುತ್ತಿಯನುಂಡು ಸೊಂಪಾಗಿರೆ,

ಕೊಲ್ಲಾರಿ ಚಕ್ಕಡಿಗೆ ಹೂಡಿರುವ ಎತ್ತುಗಳ
ಕೊರಳ ಗೆಜ್ಜೆಯ ಸರವು ಟಿಂಟಿಣಿಸಲು
ಮೂಕೆಯಲಿ ಕುಳಿತಿರುವ ಆಳು ಲಾವಣಿ ಹಾಡೆ
ಕಿವಿಗೊಟ್ಟು ಕೇಳುವವು ಬಾನು ಬಯಲು !

ರಾಜರಾಣಿಯರ ಕತೆ ದೇವ-ದೆವ್ವಗಳ ಕತೆ
ಎಂಥವೆಂಥವೊ ನೂರು ಕತೆಯ ಕೇಳಿ
ಸೆಟ್ಟಿಕತೆ ಕಟ್ಟುಕತೆಗೆಲ್ಲದಕು ಹೂಂಗೊಟ್ಟು
ತಲೆಯಾಡಿಸಿರೆ ಮತ್ತೆ ಕತೆಯ ಹೋಳಿ !

ಚಂದ್ರ-ಚಿಕ್ಕೆಗಳಲ್ಲಿ ಮೋಡ-ಕಾಡುಗಳಲ್ಲಿ
ಬಾಲ್ಯದಿಂದಲು ಪ್ರೀತಿ ಬಲಿಯುಸಿತ್ತು;
ಸತ್ತವರ ಕಂಡಾಗ ಮನವೆಲ್ಲ ಹೌಹಾರಿ
ಏನೇನೊ ಪ್ರಶ್ನೆಗಳ ಹೆಣೆಯುತಿತ್ತು.

ಮಳೆಯು ಬಂದರೆ ಹಿಗ್ಗಿ ಮೈತೊಯಿಸಿಕೊಳ್ಳುವದೆ
ನೀರಾಟವಾಡುವದೆ ಆಗ ಸೊಗಸು,
ಕಾಲುವೆಯ ನೀರಿನಲಿ ಕಾಗದದ ದೋಣಿಗಳ
ತೇಲಬಿಡೆ ಮುಳುಮುಳುಗಿ ಹೋದವೇಸು?

ನಾವು ಸಾಕಿದ ಬೆಕ್ಕು ತೀರಿಕೊಂಡಿರುವಾಗ
ಬೋರಾಡಿ ಅತ್ತಿರುವುದೆನಗೆ ನೆನಪು;
ಅದನೊಯ್ದು ಹೊಲದಲ್ಲಿ ಮಣ್ಣುಗೊಟ್ಟೈತರಲು
ಮನಸಿಗಾಯಿತು ಏಕೊ ನಸುವೆ ತಣಿಪು.

ಕಮ್ಮಾರ ಮಾನಪ್ಪ ಕೆಂಗುಲಿಮೆ ತಿದಿಯೊತ್ತೆ
ಕಬ್ಬಿಣವು ಕೆಂಗೆಂಡದಂತಾಗಿರೆ,
ಅಡಿಗಲ್ಲ ಮೇಲಿರಿಸಿ ದೊಡ್ಡ ಸುತ್ತಿಗೆ ಪೆಟ್ಟ
ಹಾಕುತಿರೆ ಸುತ್ತೆಲ್ಲ ಕಿಡಿ ಸೂಸಿರೆ,

ಅಬ್ಬಬ್ಬ ಕಬ್ಬಿಣವ ಮೇಣದಂದದಿ ಮಿದ್ದ
ಆಜಾನುಬಾಹುಗಿಹುದಾವ ಚದುರು?—
ಎಂದು ಅಚ್ಚರಿಗೊಂಡು ಯೋಚಿಸಿರೆ ಯಾಚನೆಯು
ದಾರಿಯಲಿ ಬರಲಿಲ್ಲ ಹರಿಕಾರರು.

ಅರಲು ತುಳಿಯುತ ಮಿದ್ದಿ ಹದಗೊಳಿಪ ಕುಂಬಾರ
ಮಲ್ಲಣನ ತಿಗುರಿಯೇ ಕಮ್ಮಟವೆನೆ
ನೋಡನೋಡುತ ಗಡಿಗೆ ಮಡಕೆಗಳ ಸಾಲುಗಳು
ನಮ್ಮೂರಿಗವನಡೆಯೆ ಹಂಚಿನ ಮನೆ!

ಕೆರವು ಹೊಲಿಯುವ ದೀನ ದಲಿತ ಮಾದರ ದುರುಗ
"ಮುಟ್ಟಬೇಡಿರಿ ತಂದೆ"– ಎಂಬ ನುಡಿಗೆ
ನನ್ನೆದೆಯು ಕಸವಿಸಿಯು ಹೇಳತೀರದು ಆಗ
ಬಾಲಕರಿಗೆಲ್ಲಿಯುದು ಮಡಿ ಮೈಲಿಗೆ?

ದನವ ಕಾಯುವ ನಿಂಗ ಮಹಿಷವಾಹನನಾಗಿ
ಕೊಳಲನೂದುತ ಮನೆಗೆ ಹಿಂದಿರುಗಲು
ಅವನ ಕಿಸೆ ತುಂಬೆಲ್ಲ ಕಾರಿಬೋರೆಯ ಹಣ್ಣು
ಇಪ್ಪಿ ಚಪ್ಪರ ಬದನೆ ಮಾಂಗಾಯ್ಗಳು.

ಕೆಲಸಿಗರ ಕೆಂಚನನು ಕಂಡರೀಗಲು ಭಯವು
ಒಡೆದ ಕನ್ನಡಿ ಮುರಿದ ಮೊಂಡುಗತ್ತಿ!
ಅವನ ಕಟಕಟಿಯಿಂದ ತಲೆಯೊಮ್ಮೆ ಪಾರಾಗೆ
ಮರುಜನ್ಮ ಪಡೆದಂತೆ ಉರಿವ ನೆತ್ತಿ!

ಹರಿವ ಹಳ್ಳದ ದಂಡೆಗಿರುವ ಮಾಸತಿ ಕಲ್ಲು
ಬಾವಿಕಟ್ಟೆಯ ಬಳಿಯ ವೀರಗಲ್ಲು
ಎಣ್ಣೆಯುಣ್ಣುತ ಪೂಜೆಗೊಳ್ಳುವುದ ಕಂಡಿದ್ದೆ
ಹೊಲದ ಬದುವಿನ ಸಣ್ಣ ಗುಂಡುಕಲ್ಲು.

ಭಕ್ತಿಯೋ ಭೀತಿಯೋ ಹಳ್ಳಿಗರ ಬಾಳಿನಲಿ
ದೇವತಾರಾಧನೆಯು ಮೆರೆವುದಷ್ಟೆ ?
ಆದಿನಿಂದಿಂದುವರೆಗೆನ್ನ ಮನದೊಳು ಮಾತ್ರ
ಮೂರ್ತಿಪೂಜೆಯ ಮಾತು ಅಷ್ಟಕಷ್ಟೆ.

ತಂದೆ ನಸುಕಿನೊಳಿದ್ದು **ಅನುಭವಾಮೃತ** ಓದೆ
ಸಕ್ಕರೆಯ ನಿದ್ದೆಯಲಿ ಸವಿಯುತಿದ್ದೆ;
ಮುಂಜಾವ ತನ್ನ ಗುಂಜಾರವದಿ ಕಿವಿತುಂಬೆ
ನಾದಲಹರಿಯ ನೂಲನೆಳೆಯುತಿದ್ದೆ.

"ಅವರವರ ಭಾವಕ್ಕೆ ಅವರವರ ಅರ್ಚನೆಗೆ
ಅವರವರಿಗೇ ದೇವ ನೀನೊಬ್ಬನೆ"
**ಮುಪ್ಪಿನ ಷಡಕ್ಷರಿಯು** ಅನುಭಾವದಲೆಯೊಂದು
ಜಂಗಮನ ತಂಬೂರಿಯಲ್ಲಿ ಸಸಿನೆ.

ಕೇಳಿಕೇಳುತ ಎದೆಯಲಾವುದೋ ಭಾವನೆಯು
ಹುಚ್ಚು ಹೊಳೆ ಹೊರಚೆಲ್ಲಿ ಮೊರೆಯುತಿತ್ತು;
ತಲ್ಲೀನವಾದ ಮನ ಚಿಂತನೆಗೆ ತೊಡಗಿರಲು
ಅಕ್ಕಪಕ್ಕದ ಜನವು ನಗುತಲಿತ್ತು.

ಸುಪ್ಪಿ ಬಾ ಚೆನ್ನಯ್ಯ ಸುಪ್ಪಿ ಬಾ ಲಿಂಗಯ್ಯ
ಸುಪ್ಪಿ ಬಾ ಎನ್ನುತ್ತ ಸಾರುವಯ್ಯ.
ಇರುಳಿನಲಿ ಕಂದೀಲ ಬೆಳಕಿನಲಿ ಬರುವಂತೆ
ಬಾಲ್ಯದನುಭವ ಮುರಳಿ ಕರೆವುದಯ್ಯ

ನಾನು ಹುಟ್ಟಿದ ಹಳ್ಳಿ ತೊರೆದು ಬೇರೂರಲ್ಲಿ
ನೆಲಸುವಾ ಸಮಯಬರೆ ಸೋತು ಹೋದೆ,
ಆ ಗೆಳೆಯರಾ ಎಳೆಯರಾನೋಟವಾಕೂಟ
ನೆನೆದು ಕಣ್ಣೀರ್ಮಿಡಿದು ಖಿನ್ನನಾದೆ.

ಇಂತಿಂತು ಈವರೆಗು ಹಳ್ಳಿ 'ಬೆಳ್ಳಿ'ಯ ತೆರದಿ
ಮನ ಚಿದಂಬರದಲ್ಲಿ ಮಿನುಗುತಿಹುದು;
ನನ್ನ ಬಾಳಿನಲೊಂದು ಮೈಲುಗಲ್ಲಾಗಿಹುದು
ನೆನೆದವರ ಮೈಮರೆಸಿ ಮೆರೆಯುತಿಹುದು.

ಕನ್ನಡದ ಶಾಲೆಯಲಿ ಓದು ಮುಗಿಯುತ ಬರಲು
ಮುನ್ನಡೆವ ಹಂಬಲವು ಒಡಮೂಡಿರೆ
ನಿರ್ಧಾರದುದ್ಯಾಪಿ ಪ್ರಮಿತಕ್ಕೆ ಬಾರದಿರೆ
ಅಂತು ಇಂತೂ ಕೊನೆಗೆ ನಿಶ್ಚಯಿಸಿರೆ,

ಹತ್ತು ವರುಷಗಳಾಚೆ ನಮ್ಮೂರ ಬಿಡುವಂದು
ಕತ್ತು ಬಿಗಿಬಿಗಿದಿತ್ತು ನೋವ ಸಹಿಸಿ.
ಅಗಲಿಕೆಯ ಅನುತಾಪ ಅನುಭವಿಸಲಸದಳವು
ಅದಕಿಂತ ಮರಣವೇ ಸ್ವಲ್ಪ ವಾಸಿ.

ಹಾಗು ಹೀಗೂ ಧಾರವಾಡಕೆನ್ನಯ ಪಯಣ
ನೀರ ತಪ್ಪಿದ ಮೀನ ತೊಳಲಿದಂತೆ
ಆವುದೋ ಹೊಸ ಜಗದ ಹೊಸ್ತಿಲಲಿ ಕಾಲಿರಿಸಿ
ನಡೆಯುತಿರ ಮನಕೊಂದು ಚಂದದಂತೆ.

ಬಾಳ ಸಂಪುಟದಲ್ಲಿ ಬಾಲ್ಯವೆಂಬುವದೊಂದು
ಅಳಿಸಲಾರದ ಮಧುರ ಭಾವಗೀತ !
ಮುಂದೆಬಹ ಅನುಭವದ ಕಹಿ ಫಲವನುಣ್ಣುತಿರೆ
ಮರುಕಳಿಸಿ ನೆನೆಯುವದೆ ನಮ್ಮ ಸ್ವಾರ್ಥ !

ವಿದ್ಯೆಯನು ಬೆಲೆಗೊಟ್ಟು ಕೊಂಬ ಕಾಲವಿದಮ್ಮ
ಎಲ್ಲಿ ಕಣ್ಣಿಡಲಲ್ಲಿ ಸಿರಿಯಲಾಸ್ಯ
ಬಡತನದ ಬವಣೆಯಲಿ ಬಗೆಹರಿಯಲಾರದೆಯೆ
ನಿಟ್ಟುಸಿರು ಕಂಬನಿಗಳಿನಿತಸಹ್ಯ !

ಬೆರಳ ಮಧ್ಯದ ಬಿಳಿಯ ಬತ್ತಿ ಹೊಗೆಯಿಡುತಿರಲು
ವಿವಿಧ ರೂಪದ ಸುರುಳಿ ಗಾಳಿಯಲ್ಲಿ
ಕುಣಿದು ಕಣ್ಮರೆಯಾಗೆ ಗಾಳಿಯಲೆಯಲೆಯೊಡನೆ-
ಕೊನೆಗಾವ ಗುರಿಯಿಹುದೊ ಬಾಳಿನಲ್ಲಿ !

ಜಾತ್ರೆಯಲಿ ನೆರೆದ ಜನ ತೇರನೆಳೆಯುವ ಭರದಿ
ನುಗ್ಗಿರಲು ಮೈಸುಗ್ಗಿ ಬೇರೆಯಿಲ್ಲ;
ದೂರದಲ್ಲಿಯೆ ನಿಂತು ಹಣ್ಣು ಕಾಯ್ಗಳನಿಸಿತ್ತು
ಕೈಮುಗಿವ ಜನರೆಷ್ಟು ನಮ್ಮೊಳಿಲ್ಲ ?

ಕನ್ನಡ ಸರಸ್ವತಿಯ ಚೆಲು ರಥೋತ್ಸವ ಕಂಡು
ಮನದೊಳೇನೋ ಮಿಂಚಿದಂತೆ ಭಾಸ!
ಅವಳ ರಸಗಂಗೆಯಲಿ ಈಸಿ ಬಹ ಹಂಬಲದಿ
ನೋವನುಂಗುತ ಪಡೆದ ಮಧುಮಹಾಸ.

*

ಕಾವ್ಯ-ಕಲೆ-ಸಂಸ್ಕೃತಿಯ ಹೊಳಹು ತೆರೆಹೊಡೆದಂತೆ
ಭಾವಜೀವಿಯ ಮನವು ಮುಂದೋಡಿತು.
ಮೂಡಣದ ಚೆಂಬೆಳಕು ಉಷೆಯ ದರ್ಶನವೀಯೆ
ಎದೆಯ ಬಟ್ಟಲು ತುಂಬಿ ತುಳುಕುತಿತ್ತು.

ಸೌಂದರ್ಯದರ್ಶನಕೆ ದೀಪ್ತವಾಗಿಹ ಮನವು
ಪ್ರಕೃತಿಯುಪಾಸನೆಯ ಕೈಕೊಂಡಿತು.
ಚೆಂಗುಲಾಬಿಯ ಪಕಳೆ ಅಕಳಂಕವಾಗಿರುವ
ಭಾವವೀಣೆಗೆ ಬೆರಳನಾಡಿಸಿತ್ತು.

ಹೊನ್ನರಾಶಿಯ ಸುರಿದು ಕೊಂಡುಕೊಳ್ಳಲುಬಹುದೆ ?
ಚೆಲುವಿಕೆಯು ತಾನಲ್ಲ ಪಣ್ಯವಸ್ತು;
ದೇವದೇವನ ತೇಜದೋಜೆ ಪೂಜೆಗೆ ಸಂದು
ಸೃಷ್ಟಿಯಲಿ ಮೈದೋರೆ ನುಡಿ " ನಮೋಸ್ತು "

ವಿಶ್ವಮುನ್ಮೀಲಿಸುವದಾವ ತೇಜಃಪುಂಜ
ಆ ಗಭಸ್ತಿಯ ಗರ್ಭಗುಡಿಯು ಲೋಕ !
ಒಳಗಣ್ಣನೆದುರಿನಲಿ ಮೂಡಬಹುದಾ ಬಿಂಬ
ಅದಕೆ ಶರಣಾಗಿರಲು ಅದುವೆ ನಾಕ.

ಅಣುಕಣದ ಸೌಂದರ್ಯ ಬರಿಮಾತ ಜಳ್ಳಲ್ಲ
ಹಿರಿದು ಕಿರಿದೆಂಬುದು ಅಲ್ಪಬುದ್ಧಿ;
ಅಂತರಂಗದ ಶುದ್ಧಿ ಬುದ್ಧಿಗದು ಹೆದ್ದಾರಿ
ಓದುವಾದಗಳಲ್ಲ ಕಲಿತ ಬುದ್ಧಿ !

ತಾರುಣ್ಯದಾಹ್ಲಾದ ಗಾಳಿಯಲಿ ಎದೆಹಿಗ್ಗಿ
ಸುಕುಮಾರ ಸೌಂದರ್ಯ ತೆರೆಯುತಿತ್ತು.
ನಂಬುಗೆಗೆ ಇಂಬಿರದ ಮೌಢ್ಯ ಜಾಡ್ಯಗಳನ್ನು
ಜಳ್ಳು ಕಾಳುಗಳಂತೆ ತೂರುತಿತ್ತು.

ಒಳಗಿನೊಳಗಿನ ನೋವು ಸಂತಸವ ಕಬಳಿಸುತ
ಒಮ್ಮೊಮ್ಮೆ ಧೀಂಕಿಟ್ಟು ಕೊರಜಾಡಿಸೆ
ಮನೆಯ ಸಂಕಷ್ಟವೇ? ನಂಬಿದರನಿಷ್ಟವೇ?
ಒಲವಿನಿಷ್ಟವೆ?– ತಿಳಿಯದದರ ಭಾಷೆ!

ಲಾಸ್ಯಹಾಸ್ಯದ ಜೊತೆಗೆ ತಾಂಡವವು ನಡೆಯುವುದು
ಜೀವಿ ಜೀವಿಯ ನುಂಗಿ ಬದುಕುತಿಹುದು
ಇರುಳೇನು ಬೆಳದಿಂಗಳೇನು ಕಾರ್ಮೋಡದಲಿ
ಮಿಂಚು ಝಳಪಿಸಿ ಸೃಷ್ಟಿ ಸಾಗುತಿಹುದು!

ಉಳ್ಳವರ ನಿರ್ದಯದ ಕಲ್ಲುಗಾಣದ ಹೀನ
ಕೃತ್ಯದಲಿ ನಿರಿಸಿಟಲು ಬಡವರೆದೆಯು
ಕ್ಷಾಮಡಾಮರ ಭೀಮಗದೆಯನಪ್ಪಳಿಸುತಿರೆ
ನಿತ್ರಾಣವಾಗುತಿದೆ ದಲಿತ ಜನವು.

ಅನ್ನದನ್ಯಾಯದಲಿ ಕರುಳು ಕುದಿದೇಳುತಿರೆ
ಸದೆಬಡೆಯಲುದ್ವೇಗ ಕೆರಳುತಿಹುದು
ವಿಧಿ ನಿಷೇಧದ ಕಟ್ಟುಕಟ್ಟಳೆಯ ಹುಟ್ಟಳಿಸಿ
ಹೊಸ ಸಮಾಜವ ಕಟ್ಟಿ ತೋರಲಿಹುದು.

ಸಂಸಾರವೆಂಬ ಹೆಣ ಬಿದ್ದಿರಲು ತಿನಬಂದ
ನಾಯಿ ಜಗಳವ ಕಂಡು ನಕ್ಕ **ಪ್ರಭುವು,**
ನಾಯಿ ಜಗಳವ ಕಂಡು ಹೆಣವೆದ್ದು ನಗುತಲಿಹ
ಕಟು ವಿಡಂಬಕ ರೂಪ ನಮ್ಮ ಇರವು.

ವೇದಿಕೆಯ ಪೀಠದಲಿ ಉಪದೇಶ ಪಾಂಡಿತ್ಯ-
ಡಾಂಭಿಕತೆಯೇ ನಮ್ಮನಾಳುತಿಹುದು-
ಒಬ್ಬರೊಬ್ಬರ ಕಂಡು ಗುರ್ರೆಂಬ ಮಾತ್ಸರ್ಯ
ಮೌನದೊಡಲಿಗೆ ಬೆಂಕಿಯಿಡುತಲಿಹುದು!

ಏಸೊ ಈಶರು ದಾಸರಾಗಿ ಕೈಂಕರ್ಯದಲಿ
ಜನದ ಬದುಕನು ತಿದ್ದಿ ಹಸನುಗೊಳಿಸಿ,
ಮೌನ ಶರಧಿಯ ತಳದಿ ಮುತ್ತಾಗಿ ಮಲಗಿಹರು
ನಾವು ನೊರೆ ತೆರೆಗಳೋ ಜೊಂಡು ಪಾಚಿ!

ಹಲವೆಲ್ಲ ಹಂಬಲಿಸಿ ಹದುಳಗಾಣದ ಮನವು
ಹುದುಗಿಹುದು ತನ್ನೊಳಗೆ ಮೌನವಾಗಿ
ಸುಪ್ತ ಜ್ವಾಲಾಮುಖಿಯ ತೆರದಿ ಕೊಳ್ಕುದಿಸುತಿರೆ
ಎಂದು ಸಿಡಿದೇಳುವುದೊ ಕಿಡಿಯ ತಾಗಿ!

ಇರಲಿ; ಲೋಕದ ಡೊಂಕ ತಿದ್ದುವಾಸೆಯು ಬೇಡ
ನನ್ನೊಡಲ ಬ್ರಹ್ಮಾಂಡ ನನ್ನ ಲೋಕ
ಇಂದ್ರ ಚಂದ್ರಾದಿಗಳು ಕವಿ ಕಾಮಧೇನುಗಳು
ಅನುಭಾವಿಗಳ ಸಂಗದಲ್ಲಿ ಏಕ

“ ಸತ್ತವರ ಸಂಗದಲಿ ಹೊತ್ತು ಹೋಗುವದೆನಗೆ ”
ಎಂಬ ಕವಿ ನುಡಿ ನನ್ನ ದಿನದ ಸತ್ಯ,
“ ನೀತಿ ಶಾಸ್ತ್ರದ ಗೂಢ ಪ್ರೀತಿಯಲ್ಲಿದೆ ” ಎಂಬ
ಆ ಮಹಾ **ಷೆಲ್ಲಿ** ಕವಿ ವಾಣಿ ನಿತ್ಯ !

ನಮ್ಮ ಬಾಳಿಗೆ ಪರಮ ಪ್ರೀತಿಯೇ ನೆಲಗಟ್ಟು
ಪ್ರೀತಿಯೇ ಚೌಕಟ್ಟು ಬೇರೆಯಿಲ್ಲ:
ಪ್ರೇಮಕಾಗಿಂತು ನವೆವ ಸತ್ಯಕಾಮರು ನಾವು
ಸತ್ಯವಾನ್ ಸಾವಿತ್ರಿಯಲ್ಲದಿಲ್ಲ !

ಸ್ವಾರ್ಥವಿರದಿಹ ಪ್ರೇಮ ನಿಸ್ಸೀಮದಾರಾಮ
ಹೋಮಾಗ್ನಿಯಂತಿಹುದು ಪ್ರೇಮಾಗ್ನಿಯು;
ಪತನ ಹೊಂದುವ ಆ ಪತಂಗದಂತಿದೆ ಕಾಮ
ಪ್ರೇಮಚಿನ್ನವ ಸುಡುವ ದಿವ್ಯಾಗ್ನಿಯು !

ಚೆಲುವೆ ಗುಣವತಿಯಾಗೆ ಪ್ರೇಮ ಸಾಕ್ಷಾತ್ಕಾರ
ಹೃದಯದೊಲವೇ ಪರಂಜ್ಯೋತಿಯಯ್ಯ !
ಗುಣವಿರದ ಬರಿ ರೂಪ ಬಿಸಿಲು ನಂಜಿನ ತಾಪ
ಮನಸೆಳೆವ ವಿಷಕನ್ಯೆ ನೋಟ ಹೇಯ.

ಹೆಣ್ಣ ರೂಪವ ಕಂಡು ಕಣ್ಣು ಮಂಜಾಗುವದು
ಬುದ್ಧಿ ಮಂಕಾಗುವದು ಸಹಜವೇನೊ !
ಸೌಂದರ್ಯಯೋಗಿಯೊಲು ಕಾಮವಾಸನೆ ತ್ಯಜಿಸಿ
ನೋಡುತಿರೆ ಬೇರೊಂದು ಹೊಳೆಯದೇನು ?

ನಿಚ್ಚಳದ ನೋಟದಲಿ ಅಚ್ಚಳಿಯದಂತಿರುವ
ಸಚ್ಚಿದಾನಂದವೂ ಚೆಲುವಿಗಿಹುದು;
ಚೆಲುವಿನಾರಾಧನೆಗೆ ನಿಜ ಕಲೋಪಾಸನೆಗೆ
ದರ್ಶನ ವಿಶುದ್ಧಿಯೇ ಮೂಲವಿಹುದು.

ಇಲ್ಲಿ ಭಾವನೆ ಮೊದಲು ಬುದ್ಧಿಯದರಡಿಯಾಳು
ಮೊದಲ ನೋಟಕೆ ರತಿಯು ಸೌದಾಮಿನಿ!
ಪ್ರೇಮಿಗಳ ಹೃದಯಾಂತರಾಳದಲಿ ಮೌನದಲಿ
ಗುಪ್ತಗಾಮಿನಿ ಪ್ರೇಮ ಮಂದಾಕಿನಿ.

ಹೆಣ್ಣು ಮನುಕುಲದೊಂದು ಪುಣ್ಯದಾ ಬನದಲ್ಲಿ
ಕಕುಲಾತಿಯರಳಿಸಿದ ಮಧುರ ಹೂವು!
ಎದೆಯ ಹೊಂಬಟ್ಟಲಲಿ ಪ್ರೇಮ ಪೀಯೂಷವಿರೆ
ಒಕ್ಕುಡಿತೆಯನು ಕುಡಿದರಿಲ್ಲ ಸಾವು!

ಅಂಥ ತಿಳಿಯೊಲವಿಂಗೆ ಬಾಯಾರಿ ಕುಳಿತಿರಲು
ಮೋಡಗಳ ಕರುಮಾಡದಿಂದಳೊರ್ವ
ಯಕ್ಷಕನ್ಯೆಯು ಇಂದ್ರಜಾಲವನು ಕರಗಿಸುತ
ಪನಿಯಾಗಿ ಸುರಿಸಿದಳು ಓ ಅಪೂರ್ವ!

ಸರಳತೆಯು ಸೌಜನ್ಯ ಮುಗ್ಧತೆಯು ಮಾಧುರ್ಯ
ಅವಳ ಚೆಲುಮೊಗದಲ್ಲಿ ಗುಡಿಗಟ್ಟಿರೆ,
ಜಗದಣ್ಣುಸಣ್ಣುಗಳು ನವನವ ವಿಲಾಸಗಳು
ಕೇಂದ್ರ ಬಿಂದುವಿನಂತೆ ಮನಮುಟ್ಟಿರೆ,

ಕುಸುಮ ಕೋಮಲೆ ಲಲಿತೆ ಸುರಲೋಕ ಸುಂದರಿಯು!
ಚೈತ್ಯಾಕ್ಷಿ ಕಣ್ದೆರೆಯೆ ಅರುಣೋದಯ!
ಒಂದೆ ಚಣದಲಿ ತಟಿಲ್ಲತೆ ತೆರಂಬೊಳೆವಂತೆ
ಆನಂದದೂರ್ಮಿಯಲಿ ಕರುಣೋದಯ!

ಅವಳ ನಗೆಮಲ್ಲಿಗೆಯ ಮಕರಂದದೌತಣಕೆ
ಕಣ್ಗೊಂಬಿಯೊಗುಮಿಗುವ ವಿಸ್ಫುರಣಕೆ,
ಕೊರಳು ಕೋಗಿಲೆಯಂತೆ ಸುರಿವ ಜೇನಿಂಚರಕೆ
ಮಂತ್ರಮುಗ್ಧನ ಮಾಡೆ ಚಿನ್ಮಾತೃಕೆ!

ಆದರಾವುದೊ ತೆರೆಯು ಜೊತೆಬಾಳನಗಲಿಸಲು
ರೂಢಿ ರಾಕ್ಷಸ ಮಿಂಚುಗೈಯ ಚಾಚೆ,
ಮನವು ತಬ್ಬಿಬ್ಬಾಗಿ ಚೈತನ್ಯವಡಗಿರಲು–
ಈ ಸಮಾಜವೊ ನಿಂತ ನೀರು ಕೊಳಚೆ!

ಬೆಳದಿಂಗಳಿರುಳಲ್ಲಿ ರಾತ್ರಿರಾಣಿಯ ಹೂವು
ನಾಲ್ದೆಸೆಗು ಅಚ್ಚ ಸೌಸವ ಬೀರಿರೆ,
ಅವಳ ಧ್ಯಾನದಲಿರುಳು ಹಗಲಾಗಿ ಹಗಲೊಂದು
ಇರುಳಾಗಿ ಮರುಳಾಗಿ ತೊಳಲುತ್ತಿರೆ,

ಕಾದಲೆಯ ಮುಖಬಿಂಬ ಮೋಡದಲ್ಲಡಗಿರಲು
ಮತ್ತ ಮಧುಪನ ಚಿತ್ತವತ್ತಿಹಣ್ಣು!
ಸಂಜೆ ಮುಗಿಲಿನ ರಂಗು ಭಂಗಿಯಲಿ ಕಂಡಂತೆ
ಹಕ್ಕಿ ಹಾಡಿಗೆ ತೆರೆವೆ ಕಿವಿಯು ಕಣ್ಣು!

ಪ್ರೇಮವೆಂಬುವ ಆರದಾರತಿಯು ಹಿಡಿದಿರುವ
ಚಿಕ್ಕೆಗಳ ಬಳಗದಲಿ ಕಾಂಬೆನೇನು?
ಸಪ್ತರಂಗದ ಬಿಲ್ಲು ಸುಪ್ತವಾಗಿರುತಿರುವ
ಪ್ರೇಮಕುದ್ದೀಪನಂಗೈವುದೇನು!

ಮದರಂಗಿಯುಗುರಿನಲಿ ಸಾರಂಗಿ ಬಾರಿಸುತ
ಬೋರಂಗಿ ಚಿತ್ರಾಂಗಿ ಭೋರಿಡುತಿರೆ
ವಿಸ್ಮೃತಿಯ ಕಡಲಲ್ಲಿ ರಾಗಾನುರಾಗಗಳ
ತೆರೆ ಎದ್ದು ತೆರೆ ಬಿದ್ದು ಹೊಯ್ದಾಡಿರೆ,

ಸುಳಿಗಾಳಿಯೊಡನೊಮ್ಮೆ ಸಂದೇಶ ಕಳಿಸುವೆನೆ
ಚಂದ್ರಕಿರಣಗಳಲ್ಲಿ ಓಲೆ ಬಹವೆ?
ಹೂ-ಪಕಳೆಯಲಿ ಹೊಳೆವ ಮಂಜುಹನಿ ಮಣಿಮಾಲೆ
ಕೊರಳ ಕಂಠಿಕೆಯಿಂದ ಜಗುಳಿರುವವೆ?

ಮರೆಯಲಾಗದ ಚಿರಸುಧಾಕರೆಯು ಎನ್ನೆದೆಯ
ಒಲವನೆಂತೋ ಏನೊ ಕೆರಳಿಸಿದಳು!
ನಾನು ಕವಿಯೆಂಬುದನು ನನಗೆ ತೋರಿಸಿಕೊಟ್ಟು
ಮೌನವೀಣೆಯನಿಂತು ಮಿಡಿಸುತಿಹಳು.

ಸಖ್ಯವಿಲ್ಲದ ಜೀವ ಲಕ್ಷ್ಯವಿಲ್ಲದ ಬಾಣ;
ಜೊತೆಯಿಲ್ಲದಾ ಬಾಳ ಗೋಳರಿದೆನು;
ಸನ್ಮತಿ ಸುವಾಸಿನಿಯು ಪ್ರೇಮ ಸೀಮಂತಿನಿಯು
ಜೊತೆ ಬೇಕು ಬೇಕೆಂದು ಅಲ್ಪರಿದೆನು.

ನನ್ನ ಬಗೆಗೇ ನಾನು ಚಿಂತೆ–ಚಿತೆಯೇರುತ್ತ
ಒಳಗೊಳಗೆ ಕುದಿಕುದಿದು ಹಣ್ಣಾಗಿರೆ,
ಪರರೆದುರು ಎದೆಯಳಲ ತೋಡಿಕೊಳ್ಳುವ ವೃತ್ತಿ
ಇರದೆ ಇರಲಾರದೆಯೆ ಸಣ್ಣಾಗಿರೆ

ಏಕಾಂತವಾಸದಲಿ ಏಕಾಕಿ ಜೀವಕ್ಕೆ
ಏಕತಾರಿಯು ದೊರೆಯಲೆನಿತು ಹರುಷ!
ಕಾವ್ಯದೌಪಾಸನೆಯಲಂತು ಒಂದಾಗಿರಲು
ರಸಗಂಗೆಯಲಿ ತೇಲೆ ವರುಷ ವರುಷ

ಮಧುರಯಾತನೆಯಲ್ಲಿ ಕಾಲಯಾಪನೆಗೈಯೆ
ಬಂತು ಗೆಳೆತನ ಪುಣ್ಯಪಾಕದಂತೆ
ಹೇಗೊ ಹೇಗೋ ಹೆಗಲುಗೊಟ್ಟು ಬಂದಿರೆ ಗೆಳೆಯ-
ರೊಂದೆ ಕೊಂಬೆಯ ಹಲವು ಹೂಗಳಂತೆ!

ಮೋಟುಮರ ಚಿಗುರೊಡೆದು ಫಲಫಲಿಸಿತೆನ್ನುವೊಲು
ಗೆಳೆತನವು ರಸಧಾರೆ ಧಾರೆಯಾಗಿ
ಸುರಿದು ಸಂಜೀವನವನಿತ್ತು ಚೇತನೆಗೊಳಿಸಿ
ರೂಪಿಸಿರೆ ನಾನಾದೆ ಸಖ್ಯಯೋಗಿ!

ಜಾನಪದ ಕವಿಯೊರ್ವ ದೇಸಿ ಚೆಲುವನು ನೀಡೆ
ದೊಡ್ಡ ಮನಸಿನ ಮಹಾದೇವನಂತೆ,
ಕತೆಗಾರನಿನ್ನೊರ್ವ ಕೆಚ್ಚೆದೆಯ ಕಲಿತನವ-
ನೂಡಿಸಲು ಮೈಕೊಡವಿ ಮೇಲಕೆದ್ದೆ!

ಕಲ್ಪನೆಯ ಕಲ್ಪಗಳ ಪದ್ಮಸೇತುವೆ ರಚಿಸಿ
ಮಗುದೊಬ್ಬ ದಯೆಯ ಹೂಮಳೆಗರೆದಿರೆ,
ಆವರೂಪದಲೇನೊ ಕಾವ್ಯಪೂರ್ಣೆಯು ಮತ್ತೆ
ಮನವನಿಮ್ಮೃಗೊಳಿಸಿ ಹಾಡಿಸುತಿರೆ,

ನನ್ನ ದುಃಖವ ತನ್ನ ದುಃಖದಲಿ ಸಮನಿರಿಸಿ
ನನ್ನಂತರಂಗದಲಿ ನಿಜವ ನಿಲಿಸಿ,
ತಂಗಿಯೊರ್ವಳು ಪರಮ ಕಾರುಣ್ಯದಾಯಿನಿಯು
ಒಡಹುಟ್ಟಿಗಿಂತಲೂ ಮಿಗಿಲಾಗಿಸಿ,

ನಿರ್ಮಲಾಂತಃಕರಣಕೆನ್ನ ಮತಿಯನುಗೊಳಿಸಿ
ಸಂತವಿಸೆ, ಶ್ರದ್ಧೆಯಲಿ ತಲೆಬಾಗಿದೆ !
ಭಾವಶುದ್ಧಿಯ ಪಡೆದು ಬಳಗ ಬಳ್ಳಿಯ ತೆರದಿ
ಹಬ್ಬುತಿರೆ ನೂರೆಂಟು ನೋವ ಮರೆದೆ !

ಮಾತರಿವ, ಕವಿ, ರಸಿಕ, ಗಾಯಕರ ಮೇಳದಲಿ
ಮಾತು ಗೀತದ ರೂಪ ಪಡೆಯುತಿಹುದು;
ಮುಂಜಾವಿನಲಿ ನೂರು ಹಕ್ಕಿಗಳ ತರತರದ
ಸ್ವರದಲ್ಲಿ ಏಕತೆಯು ಮೂಡುತಿಹುದು.

ಜ್ಞಾನ ಸಿಂಧುವಿನೆದುರು ಮೌನವಾಗಿಯೆ ನಿಂದು
ಕಡೆಹಾಯಿಸುವರಾರು–ಕಾಣೆನೆಂದೆ;
ಸರ್ವಸಮಭಾವದಲಿ ಕಿರುದೋಣಿಯನ್ನೇರಿ
ಯಾನಗೈದೆವು ಕಡಲಿನಗಲಕಂಡೆ !

ಗೆಳೆಯರೊಲವಿನೊಳಿಂತು ಆಕಾಶ ಗಂಗೆಯಲಿ
ಮಿಂದು ಬಾನುದ್ದಕೂ ಈಸಬಹುದು,
ಅಂಬರದಿ ತುಂಬಿರುವ ಗಂಭೀರ ನಾದವನು
ಇಂಬುಕಯ್ಯುತ ಬಾಳ ಜಯಿಸಬಹುದು!

ದುಃಖದುಗುಡಗಳನ್ನು ಮಿಕ್ಕುಮೀರಲುಬಹುದು
ದರ್ಪಸರ್ಪದ ವಿಷವ ಹಿಳಿಯಬಹುದು,
ಬಂಧುಭಾವದೊಳಿಂತು ಒಂದುಗೂಡುತ ಬಾಳ
ಆನಂದದರಮನೆಯ ಗೈಯಬಹುದು!

ಬಹುದು-ಗಿಹುದೇನಯ್ಯ ಅಹುದಾದರಹುದೆನ್ನು
ಕಂಡುಂಡ ಮಾತನ್ನೆ ನಿರವಿಸಿರುವೆ;
ನೂರು ಜಂಜಾಟಗಳು ಹೆಡಮುರಿಗೆ ಕಟ್ಟಿದರು
ಗೆಳೆತನವೆ ಬಾ ಬಾರ ಎಂದುಸುರುವೆ!

ಧಾರವಾಡದ ನೆಲದ ಗುಣವೇನೊ ಋಣವೇನೊ!
ಕವಿಗಾಳಿ ಸವಿಗಾಳಿ ತೀಡುತಿಹುದು.
ಧಾರವಾಡದ ತಾಯ ಮುಡಿಲಲ್ಲಿ ಮೊರೆಯುಟ್ಟ
**ದತ್ತವಾಣಿಗೆ** ಎದೆಯು ಕೋಡುತಿಹುದು.

ಜನದ ಪರಿಯಂತಿರಲಿ; ನೆಲದಾಯ ಕಾರುಣ್ಯ
ಹಸಿರು ಸಾಮ್ರಾಜ್ಯದಲಿ ಕುಸುಮಿಸಿಹುದು;
ಕಂಡ ಕಣ್ಣನಗಳಲಿ ರಸಭಾವ ಸಂಚಾರ!
ಕಿರುಮಕ್ಕಳೂ ಕವಿಗಳಾಗಬಹುದು!

ಮಳೆಬಂದು ನಿಂದಾಗ ಬನದೇವಿ ಮಿಂದಾಗ
ತಂಬೆಲರ ತಂದಾಗ ಸವಿಯಬೇಕು.
ಸೋನೆವಳೆ ಸುರಿವಂದು ನೀರ್ವೊನಲು ಹರಿವಂದು
ಬಿಸಿಲು ಮಳೆಯಂದವನು ಕಾಣಬೇಕು.

ಹೂಬಿಸಿಲು ಹೊಂಬಿಸಿಲು ಚೆಂಬಿಸಿಲು ಚುಂಬಿಸಲು
ಎದೆಯನ್ನೆ ತುಂಬಿಸಲು ಬಿಂಬಿಸುತಿರೆ,
ಅಚ್ಚ ಬಂಗಾರವನೆ ಮೋಡಗಳು ಹುಡಿ ಮಾಡಿ
ಸುರಿಸಿ ಸಿಂಗರಿಸಿದವೊ ಎನುವಂತಿರೆ!

ಗಿಡಬಳ್ಳಿ ಚಿಗುರಿಡಲು ಹೊಗರೇರಿ ಹೂಬಿಡಲು
ನತ್ತಿಡಲು ಮುತ್ತಿಡಲು ತುಂಬಿ ಬಹವು;
ಕೋಗಿಲೆಯು ಪಂಚಮದ ಇಂಚರವನಿಮ್ಮಡಿಸಿ
ಹಿಗ್ಗಿನಲಿ ಹಾಡುವದು ಕವಿಬಳಗವು!

ಕಾಲೇಜಿನಟ್ಟದಲಿ ನಿಂತು ನಾಲ್ದೆಸೆಗಳಲಿ
ಸೃಷ್ಟಿರಮಣೀಯತೆಯ ಕಂಡಿರುವೆನು
ಕ್ಷಿತಿಜದಂಚಿನ ಮಿಸುನಿ ರೇಖೆ-ವಿನ್ಯಾಸವನು
ಬೆಟ್ಟಕಾನಿನ ಬೆಡಗ ಸೆರೆವಿಡಿದೆನು.

ವಾಯುವ್ಯದೆಡೆಯಿಂದ ಕಂದರದ ಮರೆಯಿಂದ
ತೂರಿ ಬಹ ರೈಲು ಕಾಳಾಹಿಯಂತೆ!
ಶಾಂತನಿದ್ರೆಯಲಿರುವ ಹಸುರು ಬಯಲಿಂದೊಮ್ಮೆ
ಸಿಳ್ಳು ಹೊಡೆವುದು ಮಾಯಕಾರನಂತೆ!

ಬಂದಿರುವ ಬರಲಿರುವ ಸಂಕಷ್ಟವೆಣಿಸುವರೆ ?
ಸುರಿವೋಗು ಸ್ಥಿರವಾಗು ಸವ್ಯಸಾಚಿ !
ಅಳ್ಳಿರಿವ ಕೊಳ್ಳಿದೆವ್ವಗಳೆಂದು ಅಂಜುವರೆ
ನಿನ್ನಾತ್ಮಕೆಚ್ಚಿನೆದುರಾವ ಭೀತಿ ?

ಎಲ್ಲಿ ಒಳಿತಿನ ಶಕ್ತಿ ವ್ಯಕ್ತಿಯಲಿ ಅಡಗಿಹುದೊ
ಎಲ್ಲಿ ವಿಶ್ವಪ್ರೇಮ ಚಿರ ಉದಾರ,
ಅಲ್ಲಿ ಭಾವಂದೀವಿ ಮನದೀವಿ ನವನವಿಡು
ಅದುವೆ ಬೆಳತಿಗೆಗಣ್ಣ ಜಾಳಂಧರ !

ಬಾನಿನಂಗಣದಲ್ಲಿ ಎನಿತು ಕಾಲದವರೆಗೆ
ಗರಿಗೆದರಿ ಹಾರೀತು ಹಾರೀತವು ?
ಹಕ್ಕಿಯುರಸುತ ಮತ್ತೆ ಚಿಕ್ಕಿ ಬಳಲುತ ಬಂದು
ಅಕ್ಕರೆಯ ಪಾನಕವ ಗುಟುಕಿಸುವವು.

ಆಕಾಶಗಂಗೆಯಲಿ ಮಿಂದು ಇಂಚರಗೈವ
ಗಾನವಕ್ಕಿಯ ಹುರುಳನರಿಯಲಿಲ್ಲ !
ಸಕಲ ಜೀವರುಗಳಿಗೆ ಮಂಗಲವ ಪಾಡುತಿಹ
ಸದ್ಭಾವಕಿಸಿತು ದಯದೋರಲಿಲ್ಲ.

ಎತ್ತೆತ್ತ ಹಾರಿದರು ಅತ್ತತ್ತ ಬೆಂಬತ್ತಿ
ಕಲ್ಲಿದೆಯ ಕಟುಗಿಡುಗ ಹೊಂಚುತಿಹುದು;
ಬಣ್ಣಬಣ್ಣದ ಗರಿಯ ರೋಮಗಳ ಕಿತ್ತೆಸೆದು
ನಿರ್ದಯದಿ ನೆತ್ತಿಯನು ಕುಕ್ಕುತಿಹುದು.

ಚಂದ್ರಮನ ಶೀತಸುಧೆ ಮನದಾಳಕಿಳಿಯುವದೆ
ಅರೆಜೀವ ಬರಿಸಾವು ಕೊನೆಗೊಳ್ಳುವದೆ?
ಶಾಂತಿರಸ ಎದೆಗೋತು ಎದೆಯನ್ನೆಯಾಗುವಳಿ
ವಿಶ್ವದಂತಃಕರಣ ಬದುಕಿಸುವದೆ ?

ತಲೆತುಂಬ ಪಾಂಡಿತ್ಯ-ಒಲವಿನರ್ಥಕೆ ಶೂನ್ಯ-
ರಾಗಿ ಬಾಳ್ವರ ಕಂಡರೆನಗಾಗದು;
ಮಾತು ಮಾತಿಗೆ ಮೋಸ, ಪರರ ಛಿದ್ರಾನ್ವೇಷ
ಇವರ ಆಳವನಿಲ್ಲಿ ಅಳಿಯಬಹುದು.

ಬೇಡವಿನ್ನೀ ಬಯಕೆ ಕೊಟ್ಟಣಾಪ ಕುಟ್ಟುವಿಕೆ
ತಲೆಚಿಟ್ಟು ಓಕರಿಕೆ ಬಂದಿರುವದು;
ತೆಗಳಿಕೆಯ ತಳಮುಳಿಕೆ ಹೊಗಳಿಕೆಯ ಬುಡುಬುಡಿಕೆ
ಕಾಲದೊರೆಗಲ್ಲಿನಲಿ ತಿಳಿಯಬಹುದು.

ಆತ್ಮಾನುಸಂಧಾನಕೆನ್ನನೆಳಸ್ಯೆ ತಂದೆ
ಸರ್ವಾತ್ಮ ಸಾಕ್ಷಿಯಲಿ ನೀ ಬೆಳಗುತ
ಮರ್ತ್ಯವಸು ಗೆದ್ದ ಮೃತ್ಯುಂಜಯೋಜ್ವಲನವೆ
ಎನ್ನೊಡಲ ಕಾಳಿಕೆಯ ಸುಟ್ಟುರಿಸುತ !

ನನ್ನ ಉಪಕಾರವಿದು ಎಂಬಹಂಕಾರವೇ ? -
ಅಂಥ ಅಹಮಹಮಿಕೆಯು ಮೊದಲಿಗಿಲ್ಲ:
ನಮ್ರತೆಯು ಜಿಜ್ಞಾಸೆ ನನಗೆ ಸುಖವಿತ್ತಿಹವು
ಜಂಭ ಬಡಿವಾರ ಕೈವಾರವಲ್ಲ !

ಲೆಕ್ಕವಿಲ್ಲದ ಜನರ ಹೊತ್ತು ತಿರುಗುತ್ತಿರುವ
ನೆಲದ ಹುಡಿಯಲ್ಲಿ ನಾನೊಂದು ಕಣವು;
ಬಾನ್ನೆಲವ ಸುತ್ತಿ ನೆರೆಮುತ್ತಿ ಘೂರ್ಣಿಸುತಿರುವ
ಬೆಂಗಾಡ ಬಿರುಗಾಳಿಯೊಂದು ಅಣುವು.

ಘುಲ್ಲವಿಸಿ ಬಲ್ದೆರೆಗಳೆದ್ದು ಹೊಯ್ದಾಡುತಿಹ
ಕಡಲಾಳದಲ್ಲಿ ನಾನೊಂದು ಹನಿಯು;
ಇಕ್ಕೆಲದಿ ಎಕ್ಕೆಕ್ಕಿ ಗಜರಿ ಗರ್ಜಿಸುತಿರುವ
ನೀರ್-ಬೀಳಿನಲಿ ಸಿಡಿವ ಜಿನುಗು ಹನಿಯು.

ದಟ್ಟೈಸಿ ಹಳು ಬೆಳೆದ ಕಟ್ಟರಣ್ಯದ ನಡುವೆ
ತರುಗುಲ್ಮಗಳಲಿ ನಾನೊಂದು ಎಲೆಯು;
ಅಂತವಿಲ್ಲದ ಗಗನ ವಿಸ್ತೀರ್ಣದಲಿ ತೇಲಿ
ಲೀನವಾಗುವ ಮೋಡದೊಂದು ಎಳೆಯು.

ಜಗದೆಲ್ಲ ಜನರ, ಮಿಗ, ಹಕ್ಕಿಗಳ, ಕೀಟಗಳ
ಗಜಬಜೆಯ ಗದ್ದಲದಲೊಂದು ದನಿಯು
ಮದ ಮೋಹ ಮಾತ್ಸರ್ಯ ಕೋಪ ತಾಪಂಗಳಿಗೆ
ಹತಿಗೊಂಡ ಖತಿಗೊಂಡ ಸೀಳು ತಲೆಯು!

ಇಲ್ಲದ್ದು ಇದ್ದದ್ದು ಎದ್ದಿದ್ದು ಬಡಿಯುತಿರೆ,
ಕಾಲ ರಣಹದ್ದಿನೊಲು ಚಂಚು ತಿವಿಯೆ,
ನಾನೆಲ್ಲಿ ನನ್ನ ಪರಿಸರವೆಲ್ಲಿ ತೆರವೆಲ್ಲಿ
ಇರವೆಲ್ಲಿ ಹೋಹುದೋ ಅರಿಯೆ ಅರಿಯೆ!

“ ಓದು ವಾದಗಳೆಲ್ಲ ಶಕ್ತಿಯುಕ್ತಿಗಳೆಲ್ಲ
ಮುಗಿದು ನಿಜ ನಿಂತದ್ದೆ ಭಾವ ಮುಕ್ತಿ ”
**ಮಧುರ ಚೆನ್ನ**ರ ಮಧುರ ನುಡಿಯ ಮರ್ಮವನರಿತು
ಮಾರುಹೋಯಿತು ನನ್ನ ಭಾವ ಭಕ್ತಿ.

ಒಂದಿಲ್ಲ ಒಂದು ದಿನ ಸಾನಂದ ಸುಂದರನು
ಎದೆಯ ಸೀಠಕೆ ಬಿಜಯಗೈಯಬಹುದು;
ಭಾವಜೀವಿಯು ವಿಮಲ ಭಾವಾನುಭಾವದಲಿ
ಒಳನಿಧಾನದ ಪರಿಯ ತೋರಬಹುದು.

ಆವರೆಗು ಅನಿಸಿಕೆಯ ನೆನಸಿಕೆಯ ತುಂಬಿರುವ
ಚಿತ್ಸೂರ್ಯ ಕಿರಣಗಳನಾಯುತಿಹೆನು;
ಹಗಲುಗಳ್ಳರು ನನ್ನ ಮನವ ಹಾಡೇ ಹಗಲು
ಹೊಕ್ಕಿರಲು ಮೊದಲವರ ಓಡಿಸುವೆನು.

ಪಂಚೇಂದ್ರಿಯಗಳುಣುವ ಪಂಚಕದ ಪರಮಾನ್ನ
ನೀರಡಿಸಿ ನೆನೆಗುದಿಗೆ ಬಿದ್ದಿರುವುದು;
ಬೇವು ತಿಂದರು ಬೆಲ್ಲ ತಿಂದಂತೆ ಸವಿಯಾಗಿ
ರುಚಿಸುವರೆಗೂ ರಸನೆ ಕಾದಿರುವುದು

ರಸವಂತ ವಾಸಂತಿ ಗುಣವಂತಿಯಾದಂದು
ಕೋಗಿಲೆಗು ಸವಿಹಾಡ ಕಲಿಸಬಹುದು;
ಕೊರಳ ಕೊಂಕಿಸಿ ಗರಿಯ ನೂರು ಕಂಗಳ ಹರಹಿ
ಕುಣಿವ ನವಿಲಿಗೆ ಕೇಕೆ ಹೊಡೆಯಬಹುದು !

ಕವಿಯ ಭಾವದ ಮೋಡ ತಂಗಾಳಿ ಸಖ್ಯದಲಿ
ಸುರುಚಿರಾಮೃತ ವರ್ಷ ಸುರಿಸಬಹುದು;
ಯಾತರದೊ ಯಾತನೆಯ ಕಾತರದಿ ಕುಳಿತಿರುವ
ಚಾತಕವು ಆತುರದಿ ಈಂಟಬಹುದು!

ಅಲೆವ ಗಾಳಿಯ ಹಿಡಿದು ತಂತಿಗಳ ಹೆಣಿಹೆಣೆದು
ವೀಣೆಯಂದದಿ ಝಣತ್ಕರಿಸಬಹುದು!
ದೇಶ ದಿಗ್ದೇಶಗಳ ಒಡಪಿನೊಡಗತೆಗಳನು
ಗಾಳಿ ಮೂಲಕ ಕೇಳಿ ಬಿಡಿಸಬಹುದು!

ಸೂರೆಪಾನದ ಹೂವ ಪುಷ್ಪಕ ವಿಮಾನದಲಿ
ಕುಳಿತು ಬಾಂದಳದಲ್ಲಿ ಏರಬಹುದು;
ಅಲ್ಲಿ ಗ್ರಹ ತಾರೆಗಳ ಮಂಚದಲಿ ಮಂಡಿಸುತ
ಚಂದ್ರನೊಡ ಚದುರಂಗವಾಡಬಹುದು.

ಇಳೆಯ ಬಾಳಿನ ಹಂತ ಮುಗಿಲುಗಳ ಪರ್ಯಂತ
ಎತ್ತರಿಸಿ ಬಿತ್ತರಿಸಿ ಬಾಳಬಹುದು;
ಪ್ರೇಮಮೂರ್ತಿಯು ನಮ್ಮ ರಾಜರಾಜೇಶ್ವರಿಯು,
ನೀತಿ ಸಮತೆಯು—ನಾಡಬೆಳಗಬಹುದು.

ಭಾವಜೀವಿಯು ನಾನು, ನನ್ನೆದೆಯ ನಂಬಿರುವ
ತುಂಬಿರುವ ಕನಸುಗಳೆ ಕಲ್ಪವೃಕ್ಷ!
ಯಾವುದಾದರು ಏನು ಕೃತಿಯಲ್ಲಿ ಬರುವನಕ
ಕನಸಲ್ಲವೆ?—ಅಲ್ಲವೆನಲು ರುಕ್ಷ!

ಮನೆಯ ಕಟ್ಟುವ ಮೊದಲು ನಕ್ಷೆಯನು ತೆಗೆವಂತೆ
ಭಾವ ಕಾಣುವುದದನು ಕನಸಾಗಿಸಿ,
ಆಮೇಲೆ ಕಲ್ಲು ಇಟ್ಟಿಗೆ ಗಚ್ಚು ಗಾರೆಯಲಿ
ಭದ್ರಗೊಳಿಸುವರದನು ರೂಪುಗೊಳಿಸಿ.

ನನ್ನ ಬಗೆಯನೆ ಬಗಿದು ಹೊಗುವ ಭರದಲ್ಲಿರಲು
ಬಗೆಬಗೆಯ ಅನುಭವವು ಬಂದುದುಂಟು;
ಅದರ ತಿಳಿಯೊಂದಿನಿತು ನನ್ನ ನುಡಿಯೊಳಗಿಳಿದು
ಬಂದಿರಲು ಜೀವಕ್ಕೆ ಹರುಷವುಂಟು!

ಮಿಡಿಗಾಯನೊತ್ತಿಟ್ಟು ಹಿಸುಕಿ ಹಣ್ಣಿಸಬಹುದೆ?
ಹಸಿಬಿಸಿಯು ರಸಪಾಕವಾಗಬಹುದೆ?
ಉಂಡ ಅನ್ನವು ಅರಗಿ ಮೈಗೂಡಿಕೊಳ್ಳದಿರೆ
ದೇಹಕೆನಿತಾದರೂ ಸೌಖ್ಯವಿಹುದೆ?

ಎದೆಯ ಗುಹೆಯೊಳಗಿರುವ ಗುರು ಗುಹೇಶ್ವರನರಸಿ
ಕಂಡುದನು ಮನದಲ್ಲಿ ಕಂಡರಿಸುತ,
ಮನುಜನೊಳಗಿನ ಮಹೇಶ್ವರನುದಿಸಿ ಕರುಣೆಯಲಿ
ಬಂದಂದು ಲೋಕಕ್ಕೆ ಸುಖದ ಸ್ರೋತ!

× × ×

"ಅನುಭಾವವೆಂಬುವದು ಅಂತರಂಗದ ರತ್ನ
ಶಿಸು ಕಂಡ ಕನಸು ತಾನಾತ್ಮವಿದ್ಯೆ
ನಿಜನಿವಾಸದಲಿರಿಸಿ ತನ್ನರಿವ ತೋರುವದು
ಅನುಭಾವ ತಾನಲ್ಲ ಶಾಸ್ತ್ರವಿದ್ಯೆ!"

## ಪ್ರಗತಿಶೀಲ ಸಾಹಿತ್ಯಮಾಲೆಯ ಪ್ರಥಮ ಪ್ರಕಟಣೆ

# ಸೆರೆಯಿಂದ ಹೊರಗೆ

## ಶ್ರೀ. ಬಸವರಾಜ ಕಟ್ಟೀಮನಿಯವರ ಕಥಾಸಂಗ್ರಹ

[ ಪ್ರೊ. ವಿ. ಎಂ. ಇನಾಂದಾರರ ವಿಮರ್ಶಾತ್ಮಕ ಮುನ್ನುಡಿಯೊಂದಿಗೆ ]

" ಶ್ರೀ. ಬಸವರಾಜ ಕಟ್ಟೀಮನಿಯವರ ನಾಲ್ಕನೆಯ ಕಥಾ ಸಂಕಲನ ಇದು. ಅವರ ಕತೆಗಾರಿಕೆಯ ಬಗ್ಗೆ ಯಾರೇನೂ ಹೊಸದಾಗಿ ಹೇಳಬೇಕಾಗಿಲ್ಲ. ಆ ಕಾಲ ಆಗಲೇ ಹಿಂದಾಗಿದೆ. ಕತೆಗಾರರ ಕಥಾ ರಚನೆಯ ಚಮತ್ಕಾರ ಮೆಚ್ಚತಕ್ಕದ್ದಾಗಿದೆ. ಈ ಸಂಕಲನದಲ್ಲಿ ತಾಂತ್ರಿಕ ದೃಷ್ಟಿಯಿಂದ ಅತ್ಯಂತ ಶ್ರೇಷ್ಠವಾದ ಕತೆಯೆಂದರೆ 'ಬಣ್ಣದ ಬುಗ್ಗೆ.' 'ಮದ್ಯ ಹಾಗೂ ಅಮೃತ' ಎಂಬ ಕಥೆಯನ್ನೋದಿದ ಮೇಲೆ 'ಶಹಬಾಸ್ ಇದು ಕಥೆ!' ಎಂದು ಕಣ್ಣಿಗೊತ್ತಿಕೊಳ್ಳಬೇಕು!"

—'ರೈತ' ಬಳ್ಳಾರಿ

" 'ಸೆರೆಯಿಂದ ಹೊರಗೆ' ಕತೆಯಲ್ಲಿ ಧರ್ಮದ ಹೆಸರಿನಲ್ಲಿ ಧರ್ಮ ಸ್ಥಳದಲ್ಲಿ ಧರ್ಮಾಧಿಕಾರಿಗಳು ನಡೆಸುತ್ತಿರುವ ದರ್ಪದ ದಾರುಣ ಚಿತ್ರ ಇದೆ. 'ಮೂವರು ಸೈನಿಕರು' ಕತೆಯಲ್ಲಿ ಭಾರತದ ಕೊನೆಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗುಂಡಿಗೆ ಎದೆಯೊಡ್ಡಿ ಮಾಡಿ ಮಡಿದ ಮೈಲಾರ ಮಹಾ ದೇವ ಮತ್ತು ಆತನ ಸಂಗಡಿಗರ ದುರಂತದ ಎದೆ ಕೊರೆಯುವ ದೃಶ್ಯ ಇದೆ. 'ಉಪಸಂಪಾದಕನ ಕುರ್ಚಿ' ಯಲ್ಲಿ ಜೀವ ಬೀಳುವವರೆಗೂ ಒಂದೇ ಪತ್ರಿಕೆಯ ಸಹಸಂಪಾದಕನಾಗಿ ದುಡಿದು ಕೊನೆಗೆ ಪತ್ರಿಕೆ

ಹೆಸರುಗಳಿಸಿದ ಮೇಲೆ ನಿರ್ದಯತನದಿಂದ ಒಡೆಯರು ಆ ಬಡ ಉಪ ಸಂಪಾದಕನನ್ನು ಹೊರದೂಡಿದ ಚಿತ್ರವಿದೆ. ಭಾಷೆ ಗಂಭೀರವಾಗಿದೆ. ಸರಳವಾಗಿದೆ. ಶ್ರೀ ಶಿವರಾಮ ಕಾರಂತರ ಹಾಗೆ ಇವರಿಗೂ ದಯೆ ಯಿಲ್ಲ, ದಾಕ್ಷಿಣ್ಯವಿಲ್ಲ. ಸ್ಪಷ್ಟವಾದಿಗಳು. ಎತ್ತಿ ತೋರಿಸಬೇಕಾದುದನ್ನು ನೇರವಾಗಿ ತೋರಿಸುತ್ತಾರೆ. ಅನ್ಯಾಯ ಯಾರೇ ಮಾಡಲಿ, ಅದು ಅನ್ಯಾಯವೇ. ಅದರ ಖಂಡನೆಯಾಗಲೇಬೇಕೆಂಬುದು ಇವರ ತತ್ವ. ಈ ಸಂಗ್ರಹದಲ್ಲಿ ಇದನ್ನು ಕಾಣಬಹುದು."

— 'ವಿಶಾಲಕರ್ನಾಟಕ' — ಹುಬ್ಬಳ್ಳಿ

"ಪ್ರತಿಯೊಂದು ಕತೆಯಲ್ಲಿಯೂ ಲೇಖಕರು ಜನಜೀವನದಲ್ಲಿನ ಹುಳುಕುಗಳನ್ನು ತಕ್ಕ ಸನ್ನಿವೇಶಗಳೊಡನೆ ಸಹಜವಾಗಿ ಚಿತ್ತರಿಸಿದ್ದಾರೆ. ಮಾನವನ ಸ್ವಾರ್ಥಪರತೆ, ಅಧಿಕಾರ ಲಾಲಸೆ, ಬಂಡವಾಳಗಾರರ ನಿರ್ದ ಯತೆ, ಧನಿಕರ ಆಡಂಬರ, ನಿಷ್ಕರುಣ ಧ್ಯೇಯರಹಿತ ಜೀವನ ಇವುಗಳೇ ಈ ಕತೆಗಳಿಗೆ ಹಿನ್ನೆಲೆಯಾಗಿವೆ. ಬಡವರ ಗೋರಿಗಳ ಮೇಲೆ ಬಂಗಲೆ ಗಳನ್ನು ಕಟ್ಟುವ ಬಂಡವಾಳಗಾರರ ಸ್ವಾರ್ಥಪರತೆ, ಕಾಠಿಣ್ಯ, ಧನತೃಷೆ ಇವುಗಳು 'ಗಿರಿಜಾಕಂಡ ಸಿನಿಮಾ,' 'ಉಪಸಂಪಾದಕನ ಕುರ್ಚಿ', ಇವು ಗಳಲ್ಲಿ ವರ್ಣಿತವಾಗಿದೆ. 'ಗಿರಿಜಾಕಂಡ ಸಿನಿಮಾ' ಕಥಾರಚನೆಯ ಲ್ಲಿಯೂ, ವಿಷಯ ಪ್ರತಿಪಾದನೆಯಲ್ಲಿಯೂ ಯಶಸ್ವಿಯಾಗಿದೆ. ಲೇಖಕರ ಸಂಗಡ ಓದುಗರೂ ದೀನದಲಿತರಲ್ಲಿ ಸಹಾನುಭೂತಿ ಅನುಕಂಪಗಳನ್ನೂ ಬಂಡವಾಳಗಾರರ ವಿಷಯದಲ್ಲಿ ಉದ್ವಿಗ್ನತೆಯನ್ನೂ ಕಾಣುವಷ್ಟು ಪರಿ ಣಾಮಕಾರಿಯಾಗಿದೆ. ಸಮಾಜದಲ್ಲಿ ನಡೆಯುತ್ತಿರುವ ಅನ್ಯಾಯ, ದಬ್ಬಾ ಳಿಕೆಯನ್ನು ಕಂಡು ಸಹಿಸದೆ ಲೇಖಕರು ಅದನ್ನು ಪ್ರತಿಯೊಂದು ಕತೆ ಯಲ್ಲಿಯೂ ಪ್ರತಿಪಾದಿಸಹೊರಟಿದ್ದಾರೆ. ಪ್ರತಿಯೊಂದು ಕತೆಯೂ ಓದು

ಗರಲ್ಲಿ **ಕಥೆಯ** ತತ್ವ ಪ್ರತಿಪಾದನೆಯ ಹಿನ್ನೆಲೆಯನ್ನು ಅನುಮೋದಿಸು ವಷ್ಟು ಸ್ವಭಾವ ಬೀರುತ್ತದೆ. ”

**ಶ್ರೀಮತಿ ಎ. ವಿ. ಲಲಿತ** (‘ ಪ್ರಜಾವಾಣಿ ’ ಬೆಂಗಳೂರು)

೧೦೦+೧೭ ಪುಟಗಳು **ಬೆಲೆ ರೂ ೧–೯–೦** (ಅಂಚೆಯುವೆಚ್ಚ ಸೇರಿ)

*   *   *

## ಪ್ರಗತಿಶೀಲ ಸಾಹಿತ್ಯಮಾಲೆಯ ದ್ವಿತೀಯ ಪ್ರಕಟಣೆ

# ಗಡೀಪಾರು

**ಶ್ರೀ. ಕೋ. ಚೆನ್ನಬಸಪ್ಪ,** ಬಿ. ಎ., ಎಲೆಲ್. ಬಿ. **ಬಳ್ಳಾರಿ**

ಅವರ ಸಣ್ಣ ಕಥೆಗಳ ಸಂಕಲನ

ಕನ್ನಡ ಕಥಾಪ್ರಪಂಚಕ್ಕೆ ಶ್ರೀ. ಕೋ. ಚೆನ್ನಬಸಪ್ಪನವರು ಹೊಸಬರೇನೂ ಅಲ್ಲ. ಕಳೆದ ಹಲವು ವರ್ಷಗಳಲ್ಲಿ ಅವರು ಅನೇಕ ಸುಂದರ ಕಥೆಗಳನ್ನು ಬರೆದು ರಸಿಕಲೋಕದ ಪ್ರೀತಿಯನ್ನು ಗಳಿಸಿ ಕೊಂಡಿದ್ದಾರೆ. ‘ಉಷಾ’ ‘ಸ್ವತಂತ್ರ’ ಇತ್ಯಾದಿ ಪತ್ರಿಕೆಗಳಲ್ಲಿ ಅವರ ಕತೆಗಳು ಪ್ರಕಟವಾಗಿವೆಯಾದರೂ ಪುಸ್ತಕ ರೂಪದಲ್ಲಿ ಹೊರಬರುತ್ತಿರುವ ಅವರ ಕಥಾಸಂಗ್ರಹ ಇದೇ ಮೊದಲನೆಯದು.

ಸುಮಾರು ೧೨೦ ಪುಟ **ಬೆಲೆ: ರೂ. ೧–೧೪–೦**

(ಅಂಚೆಯುವೆಚ್ಚ ಸೇರಿ)

# ಕಾವ್ಯಾಕ್ಷಿಯನ್ನು ಕುರಿತು

ಕವಿಗೆ ಶಾಂತ ಸರೋವರದಂತಹ ಹೃದಯ, ಅಭ್ಯಾಸ ಬಲದ ಭಾಷಾಪ್ರಭುತ್ವ, ನವೀನ ವಿಚಾರಗಳ ಜಾಗೃತಿ, ಹಸನಾದ ಮನಸ್ಸು ಇವೆಲ್ಲ ಬೇಕು. ಕವಿ ಚೆನ್ನವೀರರಿಗೆ ಇವುಗಳಿವೆ ಯೆಂಬುದಕ್ಕೆ ‘ಕಾವ್ಯಾಕ್ಷಿ’ ಯು ಸಾಕ್ಷಿ.

ಇಲ್ಲಿಯ ಕವನಗಳು ತಿಳಿಯಾಗಿ ಹರಿಯುತ್ತ ಓದುಗಂಗೆ ‘ಸಾನಂದ ಸುಂದರನ ಆನಂದ ಲಹರಿ’ ಯನ್ನು ಒದವಿಸುತ್ತಿವೆ. ಹೃದಯದ ‘ಒಳದನಿ’ಗೂ’ ಅದರ ಅಭಿವ್ಯಕ್ತಿಯ ‘ಹೊರದನಿ’ ಗೂ ಹೊಂದಿಕೆ ಕಂಡುಬರುತ್ತಿದೆ. ‘ನೋವು ಸರಳಾಟಗಳ ವಿಷಮ’ತೆ. ‘ಹಾಡಿನ ಸವಿ ಸೊಲ್ಲು’ ಇವುಗಳನ್ನು ಮೇಳವಿಸಿಕೊಂಡ ಇಲ್ಲಿಯ ಕವಿವಾಣಿ ಸತ್ತ್ವಯುತವಾಗಿದೆ. ನಮ್ಮ ನಾಡಿನ ಹಿರಿಯ ಕವಿಗಳನ್ನು (ಕುವೆಂಪು, ಅಂಬಿಕಾತನಯದತ್ತ) ಅನುಸರಿಸುವ ಜಾಣ್ಮೆ ಅಲ್ಲಲ್ಲಿ ತೋರುತ್ತಿದೆ. ತಿಳಿಗನ್ನಡದ ಕಂಪು ಕವಿತೆಯ ರುಚಿಯನ್ನು ಹೆಚ್ಚಿಸಿದೆ. ‘ಗೆಲುವೆನೆಂಬ ಭಾಷೆ’ ‘ಬಾಳಿನ ಬೀಳಿದು’ ‘ಈ ಘಟಪ್ರವಾಹ’ ‘ತಾಳ್ಮೆ’ ಇವುಗಳ ಗಭೀರತೆ. ‘ಹುತಾತ್ಮ’ ‘ತಂಗಿಯ ಓಲೆಯನ್ನೋದಿ’ ಇವುಗಳ ಹೃದಯಸ್ಪರ್ಶಿ ಭಾವ, ‘ಮೇಘೋಪಾಸನೆ’ ‘ಉಷಾ’ ‘ಚಂದ್ರೋದಯ’ ಗಳ ಸೊಗಸುಗಾರಿಕೆ. ‘ಬಂಧದಿಂ ಬಿಡುಗಡೆಗೆ’ ‘ಅಖಂಡ ಕರ್ನಾಟಕ’ ಗಳ ಸ್ಫೂರ್ತಿ ಇವುಗಳು ಕವಿಯ ಸತ್ವಕ್ಕೆ ಉದಾಹರಣೆಗಳಾಗಿವೆ.

ಚಿಕ್ಕ ವಯಸ್ಸಿನ ಚೆನ್ನವೀರರ ಹೃದಯ ಪರಿಪಾಕ, ಅಭಿವ್ಯಕ್ತಿಯ ಶಕ್ತಿ, ನೋಟದ ವಿಶುದ್ಧತೆ, ಜೀವನದ ಬಗೆಗೆ ಸಮತೆ, ಹೊಂಗನಸಿನ ಸವಿಗಾರಿಕೆಗಳು- ಇವು ಯಾರಿಗಾದರೂ ಹರುಷ ವನ್ನೀಯಬಲ್ಲವು.

ಚಿಕ್ಕ ಚೆನ್ನವೀರರ ಚಿಕ್ಕ ಕಾವ್ಯಾಕ್ಷಿ ಕನ್ನಡ ಕವನ ಬಾಂದಳದ ಶೋಭಾಯಮಾನವಾದ ಚಿಕ್ಕೆಯಾಗಿದೆ.

—ಸ. ಸ. ಮಾಳವಾಡ.